ಮುಂಬಯಿ ಶಾಸನ ಸಭೆಯ ವಿಜಾಪುರದ ಉತ್ತರ ಭಾಗದ ಕನ್ನಡ ಪ್ರತಿನಿಧಿಗಳಾದ ಶ್ರೀ ಹುಜುರೇಯವರು ತಾವು ಮುಂಬಯಿ ಶಾಸನ ಸಭೆಗೆ ರಾಜೀನಾಮೆ ಕೊಟ್ಟು ಹೊರಬೀಳಲು ಅನುಮತಿ ಕೊಡಬೇಕೆಂದು ಕೆ. ಪಿ. ಸಿ. ಸಿ. ಗೆ ಒಂದು ಪತ್ರವನ್ನು ಬರೆಯುತ್ತ ಅದರಲ್ಲಿ ಕೆಳಕಂಡಂತೆ ಪ್ರಕಟಿಸಿರುವರು.

ಮುಂಬಯಿಯು ಬೇರೆ ಸಾಹೇಬರ ಮಂತ್ರಿಮಂಡಲವು ಕರ್ನಾಟಕಕ್ಕೆ ಉಪಯೋಕ್ತವಾದ ಯಾವ ಕಾರ್ಯವನ್ನೂ ಕೈಕೊಳ್ಳುವಂತಿಲ್ಲ. ಶಾಸನ ಸಭೆಯ ಕನ್ನಡ ಸದಸ್ಯರು ಶಾಸನ ಸಭೆಯಲ್ಲಿ ಏನೂ ಮಾತಾಡುವಂತಿಲ್ಲ. ಅಲ್ಲಿ ಕೈ ಎತ್ತಿರಿ ಎಂದು ಹೇಳಿದಾಗ ಕೈಎತ್ತಬೇಕಾಗಿರುವದು. ಇಂತಹ ಪರಿಸ್ಥಿತಿಯಲ್ಲಿ ನಾವು ನಿಮಗೆ ಓಟನ್ನು ಕೊಟ್ಟು ಶಾಸನ ಸಭೆಗೆ ಕಳಿಸಿಕೊಟ್ಟ ಮತದಾರರಿಗೆ ನಮ್ಮ ಮುಖವನ್ನು ತೋರಿಸುವಂತಿಲ್ಲ. ಪರಿಸ್ಥಿತಿಯು ಬಹಳ ಅಸಹನೀಯವಾಗಿದೆ. ಇಂತಹ ಪರಿಸ್ಥಿತಿಯಿಂದ ಬಿಡುಗಡೆ ಹೊಂದಬೇಕಾಗಿರುವದು. ಆದುದರಿಂದ ಶಾಸನ ಸಭೆಗೆ ರಾಜೀನಾಮೆ ಕೊಟ್ಟು ಆದರಿಂದ ಹೊರಬೀಳಲಿಕ್ಕೆ ನನಗೆ ಅನುಮತಿ ಕೊಡಬೇಕಾಗಿ ನಾನು ನನ್ನನ್ನು ಚುನಾವಣೆಗೆ ನಿಲ್ಲಿಸಿದ ಕೆ. ಪಿ. ಸಿ. ಸಿ. ಯನ್ನು ಬೇಡಿಕೊಳ್ಳುವೆನು ಇತ್ಯಾದಿ.

ನವಸಂದೇಶವು ಇದುವರೆಗೆ ಮಂತ್ರಿಮಂಡಲದ ಬಗೆಗೂ ಶಾಸನ ಸಭೆಗಳ ಬಗೆಗೂ ಬರೆದಿದ್ದ ಒಂದೊಂದೇ ವಿಷಯವು ಈಗ ಹೊರಬೀಳಹತ್ತಿದೆ. ಶ್ರೀ ಹುಜುರೇಯವರು ಎದೆಗಾರಿಕೆಯಿಂದ ಮೇಲ್ಕಂಡ ಹೇಳಿಕೆಯನ್ನು ಕೊಟ್ಟು ನಿಜ ಪರಿಸ್ಥಿತಿಯನ್ನು ಜನತೆಯ ಮುಂದೆ ಇಡಲು ಮುಂದಕ್ಕೆ ಬಂದುದಕ್ಕಾಗಿ ನಾವು ಅವರನ್ನು ಅಭಿನಂದಿಸುತ್ತೇವೆ. ಅವರ ಭವಿತವ್ಯವು ಉಜ್ವಲವಾಗಿದೆ. ನಿಜಪರಿಸ್ಥಿತಿಗಳನ್ನು ಬಹಿರಂಗ ಪಡಿಸದೇ ಜಿಗಳ ಹಳಗಳಂತೆ ಶಾಸನ ಸಭೆಗೆ ಅಂಟಿಕೊಂಡಿರುವ ಇತರ ಕನ್ನಡ ಸದಸ್ಯರು ಮುಂದಿನ ಚುನಾವಣೆಯಲ್ಲಿ ಹೇಳಹೆಸರಿಲ್ಲದಂತೆ ಹೋಗುವರು. ಹಾಗೆ ಆವರು ಹೋಗಬೇಕಾದುದು ಅನಿವಾರ್ಯ. ಶಾಸನ ಸಭೆಯಲ್ಲಿ ಅಂಥವರ ಹಾಜೂರತೆಯಿಂದ ಕರ್ನಾಟಕಕ್ಕೆ ಅವಮಾನಕರ.

——

ಎಮ್ಮಿಗನೂರ
ಆದವಾನಿ ತಾಲೂಕು

೧೯-೪-೪೮ ರಲ್ಲಿ ಶ್ರೀ ಉರವಕೊಂಡ ಜಗದ್ಗುರು ಕರಿಬಸವರಾಜೇಂದ್ರ ಮಹಾಸ್ವಾಮಿಗಳು ಗಮಕಕಲಾನಿಧಿ ಶ್ರೀ ಜೋಳದರಾಶಿ ದೊಡ್ಡನಗೌಡರು ಮುಂತಾದವರೊಡನೆ ಆದವಾನಿ ತಾಲೂಕು ಎಮ್ಮಿಗನೂರ ಗ್ರಾಮಕ್ಕೆ ಆಗಮಿಸಿದರು. ಪುರಜನರೆಲ್ಲರೂ ಅವರನ್ನು ವಿಶೇಷ ಸಭ್ರಮದಿಂದ ಸ್ವಾಗತಿಸಿದರು. ಆ ದಿನ ಸಾಯಂಕಾಲ ೩-೩೦ ರಿಂದ ೪-೩೦ ಘಟಿಕೆಗೂ ಕನ್ನಡ ಕಾರ್ಯಕರ್ತರ ಸಭೆಯು ಜರುಗಿತು. ೪-೩೦ ರಲ್ಲಿ ಅಲ್ಲಿಯ ಕರ್ನಾಟಕ ಸಂಘದ ವಾಚನಾಲಯದ ವಾರ್ಷಿಕೋತ್ಸವವು ಶ್ರೀ ಮಹಾಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಜರುಗಿತು. ೫ ಗಂಟೆಯಲ್ಲಿ ಅಲ್ಲಿಯ ಹಾಯಸ್ಕೂಲಿನಲ್ಲಿ ಕನ್ನಡ ಪಂಡಿತರಾಗಿದ್ದು ಅಲ್ಲಿ ಕನ್ನಡಕ್ಕೆ ವಿಶೇಷವಾಗಿ ದುಡಿದಿದ್ದ ಮತ್ತು ಕರ್ನಾಟಕ ಸಂಘದ ಅಸ್ತಿತ್ವಕ್ಕೆ ಕಾರಣರಾದ ವಿದ್ವಾನ ಮಿಂಚೇರಿ ಶರಭಯ್ಯನವರ ಭಾವಚಿತ್ರದ ಅನಾವರಣ ಸಮಾರಂಭವು ಶ್ರೀ ಜೋಳದರಾಶಿ ದೊಡ್ಡನಗೌಡರ ಹಸ್ತದಿಂದ ಜರುಗಿತು. ನಂತರ ಅಧ್ಯಕ್ಷ ಮಹಾಸ್ವಾಮಿಗಳವರು ತಮ್ಮ ಅಸ್ಖಲಿತ ವಾಣಿಯಿಂದ ಕ. ಏ. ವಿಷಯದ ಮೇಲೆ ಭಾಷಣ ಮಾಡುತ್ತ ಆದವಾನಿ, ಅಲೂರ, ರಾಯದುರ್ಗ ತಾಲೂಕುಗಳು ಕರ್ನಾಟಕ ಭಾಗವೆಂತಲೂ ಅವುಗಳನ್ನು ೧೯೨೯ ರಲ್ಲಿ ಮದ್ರಾಸ ಶಾಸನದಿಂದ ಆಂಧ್ರ ವಿಶ್ವವಿದ್ಯಾಲಯದ ಆಡಳಿತೆಯಿಂದ ಬಿಡುಗಡೆ ಮಾಡಿಸಲಾಯಿತೆಂದು ತಿರುಗಿ ಇವು ವಿವಾದಾಂಶದ ಭಾಗವೆಂದು ಹೇಳುವದು ಅನುಚಿತವೆಂದು ಆಪ್ಪಣೆ ಕೊಡಿಸಿದರು.

ರಾತ್ರಿ ೮ ಗಂಟೆಯಲ್ಲಿ ಇಲ್ಲಿಯ ಶ್ರೀ ನೀಲಕಂಠ ದೇವಸ್ಥಾನದಲ್ಲಿ ಶ್ರೀ ಜೋಳದರಾಶಿ ದೊಡ್ಡನಗೌಡರಿಂದ ಕಾವ್ಯಾವಾಚನ ಆಯಿತು. ಶ್ರೀ ಮಹಾಸ್ವಾಮಿಗಳು ವಚನ ಸಾಹಿತ್ಯದ ಬಗ್ಗೆ ಭಾಷಣ ಮಾಡಿದರು.

ವಜ್ರಗಿರಿ ಸಣ್ಣತಿಪ್ಪಣ್ಣ
ಕಾರ್ಯದರ್ಶಿ ಕರ್ನಾಟಕ ಸಂಘ.

——

ಯುದ್ಧದ ಮಾತುಗಳು ಸಾಕು.
ಜಗತ್ತಿನ ಸರಕಾರಗಳಿಗೆ ಲೈರವರ
ಉಪದೇಶ

ನ್ಯೂಯಾರ್ಕ್:- ಜಗತ್ತಿನಲ್ಲಿಯ ಎಲ್ಲ ಸರಕಾರಗಳು ಯುದ್ಧದ ಮಾತುಗಳನ್ನು ಸಾಕುಮಾಡಿ ಶಾಂತಿಸ್ಥಾಪನೆಗಾಗಿ ಪ್ರಯತ್ನಗಬೇಕೆಂದು ಯುಕ್ತರಾಷ್ಟ್ರಗಳ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಎಂ. ಲೈರವರು ಅಧ್ಯಕ್ಷ ರುಝವೆಲ್ಟರ ಸ್ಮಾರಕಕ್ಕಾಗಿ ನೆರಡ ಪ್ರಾರ್ಥನಾ ಸಭೆಯನ್ನುದ್ದೇಶಿಸಿ ಭಾಷಣ ಮಾಡುತ್ತಾ ಹೇಳಿದರು.

Flag (I) 33

ಮದ್ರಾಸು ಪ್ರಭುತ್ವದ ನೋಟಿಫಿಕೇಷನ್ ಡೆವಲಪ್ಮೆಂಟ್ ಡಿಪಾರ್ಟ್‌ಮೆಂಟ್

ಗೌರವಾನ್ವಿತ ನೇ ವರ್ಷದ ಇಂಡಿಯನ್ ಕಂಪನೀಸ್ ಆಕ್ಟ್ಸು ೨೬ ನೇ ಸೆಕ್ಷನ್ ೨೨ನ್ವಯ 'ಲಿಮಿಟೆಡ್' ಎಂಬಂಥ ಮಾತಿಲ್ಲದೇ "ಲಿಮಿಟೆಡ್ ಲಯಬಿಲಿಟಿ" ಯುಳ್ಳ 'ಬಳ್ಳಾರಿ ಪರಾಫ್ ಮರ್ಚಂಟ್ಸ್ ಅಸೋಸಿಯೇಷನ್" ಎಂಬುವ ಸಂಸ್ಥೆಯನ್ನು ಸ್ಥಾಪಿಸಲು ಲೈಸೆನ್ಸು ದಯಪಾಲಿಸಬೇಕೆಂದು ಮದ್ರಾಸು ಪ್ರಭುತ್ವಕ್ಕೆ ಒಂದು ಮನವಿ ಅರ್ಜಿ ಬಂದಿದೆಯೆಂದು ಈ ಮೂಲಕ ಸರ್ವರಿಗೆ ತಿಳಿಸೋಣಾಗಿದೆ.

ಭಂಗಾರ ಮತ್ತು ಬೆಳ್ಳಿ, ಭಂಗಾರ ಬೆಳ್ಳಿ ಸಾಮಾನುಗಳ ವ್ಯಾಪಾರದಲ್ಲಿ ತೊಡಗಿರುವ ವರ್ತಕರ ಹಿತವನ್ನು ರಕ್ಷಿಸಲಿಕ್ಕೂ, ಅವರ ವ್ಯಾಪಾರ ಉದ್ಯಮೆಯನ್ನು ಹೆಚ್ಚಿಸಲಿಕ್ಕೂ, ಅವರಿಗೆ ವಿಶಾರ್ಗದರ್ಶಕವಾಗಲಿಕ್ಕೂ ಮುಂತಾದ ಉದ್ದೇಶಗಳಿಗಾಗಿ ಮೇಲ್ಕಾಣಿಸಿದ ಸಂಸ್ಥೆಯು ಸ್ಥಾಪನೆಯಾಗಲಿಕ್ಕೆ ಯೋಜನೆ ನಡೆದಿದೆ.

ಈ ಸಂಘದ ಇತರ ಉದ್ದೇಶಗಳನ್ನು ಸಂಘದ "ಮೆಮೊರ್ಯಾಂಡಂ ಆಫ್ ಅಸೋಸಿಯೇಷನ್" ಯೊಳಗೆ ವಿವರವಾಗಿ ತೋರಿಸಲಾಗಿದೆ. ಬಳ್ಳಾರಿಯಲ್ಲಿರುವ ಈ ಸಂಘದ ಆಫೀಸಿನಲ್ಲಿ ಅದನ್ನು ಯಾರಾದರೂ ನೋಡಬಹುದು.

ಈ ಮನವೀ ಅರ್ಜಿಗೆ ತಕರಾರು ಮಾಡತಕ್ಕಂಥ ವ್ಯಕ್ತಿ, ಕಂಪನಿ ಅಥವ ಕಾರ್ಪೋರೇಷನ್ ಯಾರಾದರೂ ಇದ್ದರೆ ಅಂಥವರು ತಾ|| ೫-೬-೪೮ ರೊಳಗೆ ಬರಹ ಮೂಲಕ ಮದ್ರಾಸು ಪ್ರಭುತ್ವದ ಡೆವಲಪ್ಮೆಂಟ್ ಖಾತೆಯ ಕಾರ್ಯದರ್ಶಿಗಳವರಿಗೆ ತಕರಾರು ಸಾದರಪಡಿಸಬಹುದಾಗಿ ಈ ಮೂಲಕ ತಿಳಿಸೋಣಾಗಿದೆ.-

ಮದ್ರಾಸು
೧೨-೪-೪೮

(ಸಹಿ) ಕೆ. ಜಿ. ವಿಸಾನ್
ಮದ್ರಾಸು ಪ್ರಭುತ್ವದ ಡೆವಲಪ್ಮೆಂಟ್ ಖಾತೆಯ ಕಾರ್ಯದರ್ಶಿಗಳು.

ಸ್ವೀಕಾರ

ಧರ್ಮಸೋಧ ಕೇರಿಟ ೧/೮ ಆಕಾರದ ೫ ಪುಟಗಳುಳ್ಳ ಮಾಸಪತ್ರಿಕೆ ಸಂಪಾದಕರು:- ಶ್ರೀ ಶ್ರೀನಿವಾಸ ಭಟ್ಟ ತಿರೋವಣಿ ಸಾಹಿತ್ಯ ಪ್ರಧಾನಾಧ್ಯಾಪಕ ಸಂಸ್ಕೃತ ಕಾಲೇಜ ಉಡುಪಿ ವಾರ್ಷಿಕ ಚಂದಾ ೩-೨-೦

ಉಡುಪಿಯ ಸಂಸ್ಕೃತ ಮಹಾಪಾಠಶಾಲಾಹೇ ವಿದ್ಯಾರ್ಥಿಗಳ ಸಂಘದವತಿಯಿಂದ ಹೊರಡುತ್ತಿರುವ ಮಾಸಪತ್ರಿಕೆ ಇದು. ಸನಾತನ ಧರ್ಮದ್ದೇಯರುವನ್ನು ಎತ್ತಿ ಹಿಡಿಯುವ ಅವುಗಳನ್ನು ಪ್ರಚಾರ ಮಾಡುವುದೇ ಈ ಮಾಸಪತ್ರಿಕೆಯ ಉದ್ದೇಶ. ನಾಸ್ತಿಕವಾದವು ತಲೆ ಎತ್ತುತ್ತಿರುವ ಈ ಕಾಲದಲ್ಲಿ ಆಸ್ತಿಕವಾದವನ್ನು ಪ್ರಚಾರ ಮಾಡುವುದು ಅನಿವಾರ್ಯ "ಸನಾತನ ಧರ್ಮದ ವೈಶಾಲ್ಯ, ಮತ್ತು ಅದರ ಪಾವಿತ್ರ್ಯದ ಸುಬೋಧಕ್ಕಾಗಿ ದೇಶ ಮತ್ತು ಜನಾಂಗದ ಹಿತಕ್ಕಾಗಿ ಸುಧಾರಕರ ಅವಹೇಳನ ಮತ್ತು ಆಕ್ಷೇಪಣೆಗಳನ್ನು ತಡೆಯಲಿಕ್ಕಾಗಿ "ಧರ್ಮ ಭೇರಿ" ಎನ್ನು ಮುಂದಿಡಿ ಇಡುವಂತೆ ಈ ಸಂಘವು ಆಣಿಮಾಡಿರುವುದು" ಎಂದು ಹೇಳಿಯೇ ಈ ಮಾಸಪತ್ರಿಕೆಯು ಹೊರಟಿದೆ. ಇದರಲ್ಲಿ ಧರ್ಮವು ಶಾಸನವಾಗಬೇಕು. "ಇಂದಿನ ಸನಾತನ ಮತ್ತು ಹಿಂದೂ ನನು" ಕನ್ನಡಿಗರ ಧಾರ್ಮಿಕ ಸಂಸ್ಕೃತಿ ಧರ್ಮರಕ್ಷಣೆಯಿಂದಲೆ ಶಾಂತಿ ಕ್ಷಣೆ "ಅಂದಿನ ಕಾಲ" ಮುಂತಾದ ಲೇಖಗಳಿವೆ. ನಮ್ಮ ಆಚಾರ, ರೀತಿ, ನಡೆ, ನುಡಿ ಇವು ಯಾವದನ್ನು ಬದಲಾಯಿಸುವುದು ಸಾಧ್ಯವಿಲ್ಲ. ಶೃತಿ ಸ್ಮೃತಿ ಪುರಾಣ ಗ್ರಂಥಗಳಲ್ಲಿ ಹೇಳಿರುವುದದನ್ನು ವಿಷಮಾಂಸಪರಿಸ್ಥಿತಿಯೊಡನೆ ಸಮನ್ವಯಮಾಡಿಕೊಂಡು ನಡೆದುಕೊಳ್ಳಬೇಕೇ ಹೊರತು ಹೊಸದಾಗಿ ಯಾವ ಬದಲಾವಣೆಯನ್ನು ಮಾಡಕೂಡದೆಂಬುದೇ ಸನಾತನಿಗಳವಾದ ಎಂದು ಈ ಪತ್ರಿಕೆಯು ಬರೆದಿದೆ. ಮತ್ತು ಇದೇ ಪತ್ರಿಕೆಯು "ವೇದಕಾಲ ಮೊದಲ್ಗೊಂಡು ಇಲ್ಲಿಯವರೆಗೂ ಸನಾತನ ಧರ್ಮವು ಕಾಲಪರಿಸ್ಥಿತಿಗೆ ತಕ್ಕಂತೆ ಸುಧಾರಣೆಗಳಿಡಿದಿದೆ" ಎಂದು ಬರೆದಿದೆ. ಅಂದಮೇಲೆ ಸನಾತನಕ್ಕೆ ಅಸ್ತಿತ್ವವೇ ಇಲ್ಲವೆಂದಾಯಿತು. ಅದುಕೂಡ 'ಕಲಿವರ್ಜ್ಯ' ಎಂದು ಹೆಸರಿಟ್ಟು ಸುಧಾರಣೆಯ ಕಡೆಗೇನೆ. ಕಾಲಿಟ್ಟಿದೆಯೆಂದು ಹೇಳಬಹುದು. ಕಲಿವರ್ಜ್ಯ ಎಂಬುವ ಘೋರಣೆಯಿಂದ ಸನಾತನವು ಸ್ವಯಂ ಪ್ರೇರಿತವಾಗಿ ಸುಧಾರಣೆಯನ್ನು ಸ್ವಾಗತಿಸಿದ್ದರೆ ಅದನ್ನು ನಾವು ಮೆಚ್ಚಬಹುದಾಗಿತ್ತು. ಆದರೆ ವಸ್ತುತಃ ಅದು ಹಾಗಿಲ್ಲ. ಶಾಸನಗಳ ಮೂಲಕ ಅದು ವ್ಯತ್ಯಾಸ ಬದಲಾವಣೆ ಹೊಂದಿನಂತರ ಕಲಿವರ್ಜ್ಯ ಎಂದು ಅನಿವಾರ್ಯದಿಂದ ಅದುಹೇಳುತ್ತಾ ನಡೆದಿದೆ. ಅದುದರಿಂದ ಸನಾತನ ಧರ್ಮವು ಸುಧಾರಕರ ಅವಹೇಳನಕ್ಕೆ ಗುರಿಯಾಗಿದೆ ಇಂತಹ ಅವಹೇಳನವನ್ನು ತಡೆದು ಸನಾತನ ಧರ್ಮವು ಕಾಲ ಮಾನ ಪರಿಸ್ಥಿತಿಗಳಿಗೆ ಒಳಪಟ್ಟು ಸ್ವಯಂ ಪ್ರೇರಿತರಾಗಿ ಸುಧಾರಣೆಯಾಗುತ್ತ ನಡೆಯುವಂತೆ ಮಾಡಲು ಧರ್ಮಬೋಧ ಪತ್ರಿಕೆಯು ಪಾಟುಪಡುವುದೆಂದು ನಾವು ಹಾರೈಸುತ್ತೇವೆ.

ಸಾವಧಾನ:- ಅಖಿಲ ಭಾರತ ಶಿವಾನುಭವ ಸಂಸ್ಥೆಯ ಪಾಕ್ಷಿಕ ಪತ್ರಿಕೆ ಸಂಪಾದಕರು:- ಪಂಡಿತ ನಾಗಭೂಷಣ ಶಾಸ್ತ್ರಿಗಳು ಗದಗ ವಾರ್ಷಿಕ ಚಂದಾ ರೂ ೨-೦-೦

ಮೇಲ್ಕಂಡ ಪತ್ರಿಕೆಯನ್ನು ವಿನಿಮಯಕ್ಕಾಗಿ ಸ್ವೀಕರಿಸಿರುತ್ತೇವೆ. ನಾಸ್ತಿಕತ್ವವು ಬೆಳೆಯುತ್ತಿರುವ ಈ ಕಾಲದಲ್ಲಿ ಮಾನವರು ಮಾನವತೆಯನ್ನು ಕಳಕೊಳ್ಳುತ್ತಿರುವರ ಈ ಪರಿಸ್ಥಿತಿಯನ್ನು ತಡೆಗಟ್ಟಲು 'ಸಾವಧಾನ' ದಂತಹ ಪತ್ರಿಕೆಯು ಬೆಳೆದು ಬಾಳಲಿ

ಗ್ರಾಮಸೇವಕ:- ಮಾಸಪತ್ರಿಕೆ ಉತ್ತರ ಕನ್ನಡ ಜಿಲ್ಲೆಯ ಗ್ರಾಮಸೇವಾಸಮಿತಿಯ ಮುಖಪತ್ರವು ಸಂಪಾದಕರು ಶ್ರೀ ತಿ. ಶ್ರೀ ನಾಯಕರು ಅಂಕೋಲಾ ವಾರ್ಷಿಕ ಚಂದಾ ರೂ ೧-೮-೦

ಗಾಂಧಿಜಿಯವರು ನಮ್ಮ ರಾಷ್ಟ್ರದ ಪುನರುದ್ಧಾರಕ್ಕಾಗಿ ಯೋಚಿಸಿರುವ ರಚನಾತ್ಮಕ ಕಾರ್ಯದ ಬೇರೆ ಬೇರೆ ಅಂಗಗಳನ್ನು ಹಾಗೂ ಅವುಗಳ ತಾತ್ವಿಕ ಹಿನ್ನೆಲೆಯನ್ನು ಕುರಿತು ವಿಶದೀಕರಿಸುವುದೇ ಗ್ರಾಮಸೇವಕ ಮುಖ್ಯ ಉದ್ದೇಶ.

ಸಂ||

ಲಕ್ಷಾಧೀಶ್ವರ - ಆದರೆ ಆ ಕಾಲದಲ್ಲಿ ಒಂದು ಕಾಸಿರಲಿಲ್ಲ

ಲಾರ್ಡ್ ಬೀವರ್‌ಬ್ರೂಕ್ ಇಂಗ್ಲಾಂಡಿನಲ್ಲಿ ಒಬ್ಬ ಕೋಟ್ಯಧೀಶ್ವರರು ಒಂದು ದಿನ ಇವರು ಸೆಂಟ್‌ಮೇರಿ ಆಸ್ಪತ್ರೆಯಿಂದ ಸೇರಿದ್ದ ಹೊರಗಡೆಯಿಂದ ಚಿಕಿತ್ಸೆಬರುವ ಜನರಗುಂಪಿನಲ್ಲಿ ಈತ ನಿಂತುಕೊಂಡ ಕ್ಯಾಮುಂದುವರಿಯಿತು. ಒಬ್ಬ ಹೆಂಗಸು ಬಂದವರಿಗೆಲ್ಲಾ ಟೀ ಕೊಡುತ್ತಿದ್ದಳು. ಆಕೆ ಕೈ ಬೆಲೆಎಷ್ಟು ಎಂದು ಬೀವರ್ ಬ್ರೂಕ್ ಕೇಳಿದ. ಆಕೆ ಒಂದು ಸೆನ್ನಿ ಎನ್ನಲು ಬೀವರ್ ಬ್ರೂಕ್ ಒಂದು ಕಡೆ ಹೋಗಿ ಕುಳಿತುಕೊಂಡ "ನಿನ್ನ ಬಳಿ ಒಂದು ಪೆನಿ ಇಲ್ಲವೇ"ಯೆಂದು ಆಕೆ ಕೇಳಲು ಇಲ್ಲವೆಂದು ಈತ ತಲೆ ಅಲ್ಲಾಡಿಸಿದ ಆಗ ನಿಜವಾಗಿಯು ಆತನಬಳಿ ಒಂದು ಕಾಸಿರಲಿಲ್ಲ ಆದರೂ ಸರವಾ ಇಲ್ಲ. ಕುಡಿ ಎಂದು ಹೇಳಿ ಆಕೆಯು ಆತನಿಗೆ ಒಂದು ಕಪ್ ಟೀ ಕೊಟ್ಟಳು. ಆತ ಕುಡಿದ. ಮಾರನೇ ದಿನ ಆಸ್ಪತ್ರೆಗೆ ಲಾರ್ಡ್ ಬೀವರ್ ಬ್ರೂಕರಿಂದ ೬೦೦೦ ಪೌಂಡಿನ ಒಂದು ಚೆಕ್ಕುಬಂದು ಎಲ್ಲರಿಗೂ ಆಶ್ಚರ್ಯವನ್ನುಂಟು ಮಾಡಿತು. ಪ್ರೀತಿಯಿಂದ ಒಂದೆನ್ನಿ ಟೀಯನ್ನು ಕೊಟ್ಟದ್ದುದಕ್ಕಾಗಿ ೬೦೦೦ ಪೌಂಡಿನ ಚೆಕ್ಕೊಟ್ಟದು ಆಸ್ಪತ್ರೆಗೆ ಬಂತು!

ಬಾಬು ರಾಜೇಂದ್ರ ಪ್ರಸಾದರು

ಗವ್ಹರ್ನರ ಜನರಲ್ಲರು?

ಲಾರ್ಡ್ ಮೌಂಟ್ ಬ್ಯಾಟನ್ನರವರು ಸೇವಾನಿವೃತ್ತರಾದ ಬಳಿಕ ಭಾರತದ ಗವ್ಹರ್ನರು ಜನರಲ್ ಪದವಿಗೆ ಶ್ರೀ ಸಿ. ರಾಜಗೋಪಾಲಾಚಾರ್ಯರು ಬಾರದೆ ಬಾಬು ರಾಜೇಂದ್ರ ಪ್ರಸಾದರು ಆ ಪದವಿಗೆ ಬರುವರು ಸರಕಾರದ ಹೊರಗೆ ಕಾಂಗ್ರೆಸ್ಸು ಮುಖಂಡರಲ್ಲಿ ಪಾತ್ರರಾಷವರು ಒಬ್ಬರೇ ಇರುವರು ಅವರೇ ರಾಜೇಂದ್ರ ಪ್ರಸಾದರು ಅವರ ತೆರವಾದ ಸ್ಥಳದಲ್ಲಿ ಪಟ್ಟಾಭಿಯವರಾಗಲಿ ಶಂಕರರಾವು ದೇವ ಇವರಾಗಲಿ ಕಾಂಗ್ರೆಸ ಅಧ್ಯಕ್ಷರಾಗಬಹುದು. ಗಾಂಧಿಯವರು ತೀರಿದನಂತರ ರಾಜಾಜಿಯವರ ವರ್ಚಸ್ಸು ಕಡಿಮೆಯಾಗಿದೆ.

ಕನ್ನಡದಲ್ಲಿ ಘಟನಾ ನಿರ್ಮಾಣವು

ವೈಕ್ಕೂರು ಘಟನಾಸಮಿತಿಯು ತನ್ನ ಕಾರ್ಯ ಲಾಪಗಳನ್ನು ಕನ್ನಡದಲ್ಲಿಯೇ ನಡೆಸಿ ಕನ್ನಡದಲ್ಲಿಯೇ ಘಟನೆಯು ಬಳಿಯಬೇಕಾಗಿ ನಿರ್ಧರಿಸಿದೆ. ಇದರ ನಕಲನ್ನು ಇಂಗ್ಲೀಷಿನಲ್ಲು ಪ್ರಕಟಿಸಲು ನಿರ್ಧಾರವಾಗಿದೆ. ಹಿಂದೆಯೆಲ್ಲಾ ಘಟನೆಯನ್ನು ತಯಾರಿಸಬೇಕೆಂಬುವ ಸವಣೆಯು ಬಿದ್ದುಹೋಗುತು. ಕನ್ನಡ ಘಟನೆಯಲ್ಲಿ ಕೆಲ ಸಂಜ್ಞೆಗಳಲ್ಲಿ, ಬೇಕಾದ್ದಲ್ಲಿ ಇಂಗ್ಲೀಷು ಪದಗಳನ್ನು ಉಪಯೋಗಿಸಬಹುದಾಗಿದೆ.

ಅರಳುಗಣ್ಣಿಗೆ ಬಾಡದ ಹೂವ್ವುಗಳು

ಅತಿಮನೋಹರವಾದ ಗುಲಾಬಿ, ಮಲ್ಲಿಗೆ, ಕಮಲ ಸುಗಂಧಿ ಮುಂತಾದ ಹೂವ್ವುಗಳು ಅರಳಿದಬಳಿಕ ಬಹು ಬೇಗ ಬಾಡಿ ನಿರುಪಯೋಗವಾಗುವವಸ್ಟೆ ಹೀಗೆ ಅವು ಬಾಡಿ ನಿರುಪಯೋಗವಾದಂತೆ ಅವು ಶಾಶ್ವತವಾಗಿ ಅರಳುವಾಗ್ಗೆ ಯಾವ ಪ್ರಕಾರ ಮನೋಹರವಾಗಿದ್ದವೊ ಹಾಗೆಇರಲಿಕ್ಕೆ ಮಾಡಲು ಕೆಲ ವೈಜ್ಞಾನಿಕಜ್ಞರುಕಂಡುಹಿಡಿದಿರುವರು. ಅರಳಿದ ಹೂವ್ವುಗಳಿಗೆ ಕೆಲವು ಸಾಯನಗಳನ್ನು ಪ್ರಯೋಗಿಸಿ ಅವು ಬಹುಕಾಲ ಬಾಡದೆ ಬಳುವಂತೆ ಮಾಡಲಾಗಿದೆ. ಆದರೆ ವಾಸನೆಗೆ ಮಾತ್ರ ಲೋಪವುಂಟಾಗುತ್ತದಂತೆ. ಈ ರಸಾಯನ ಪ್ರಯೋಗದಿಂದ ಬಿಡ್ಡ ಹುವ್ವು ಇದ್ದಹಾಗೆ ಇರುತ್ತದಂತೆ ಇದರಮೇಲೆ ಅದು ಹೂವ್ವಿನ ಅತ್ತರನು ಚಿಮಿಕಿಸಿದರೆ ಅದು ಆಗ ಅರಳಿದ ಹೂವ್ವಿನಂತೆಆಗುತ್ತದಂತೆ.

ಮದ್ರಾಸು ಪ್ರಭುತ್ವದ ನೋಟಿಫಿಕೇಷನ್.

—೦—

1913 ನೇ ವರ್ಷದ ಇಂಡಿಯನ್ ಕಂಪನೀಸ್ ಆಕ್ಟ್ಸ್ 26 ನೇ ಸೆಕ್ಷೆನ್ ಅನ್ವಯ "ಲಿಮಿಟೆಡ್" ಎಂಬುವ ಮಾತಿಲ್ಲದೆ ಲಿ ಮಿ ಟೆ ಡ್ ಲಯಬಿಲಿಟಿಯುಳ್ಳ "ಬಳ್ಳಾರಿ ಷರಾಫ್ ಮರ್ಚಂಟ್ಸು ಅಸೋಸಿಯೇಷನ್" ಎಂಬುವ ಸಂಸ್ಥೆಯನ್ನು ಸ್ಥಾಪಿಸಲು ಲೈಸೆನ್ಸು ದಯಪಾಲಿಸಬೇಕೆಂದು ಮದ್ರಾಸು ಪ್ರಭುತ್ವಕ್ಕೆ ಒಂದು ಮನವಿ ಅರ್ಜಿಯು ಬಂದಿರುವದು.

ಭಂಗಾರ ಮತ್ತು ಬೆಳ್ಳಿಯ, ಭಂಗಾರ ಬೆಳ್ಳಿ ಸಾಮಾನುಗಳ ವ್ಯಾಪಾರದಲ್ಲಿ ತೊಡಗಿರುವ ವರ್ತಕರ ಹಿತವನ್ನು ರಕ್ಷಿಸಲಿಕ್ಕೂ, ಅವರ ವ್ಯಾಪಾರ ಉದ್ಯಮೆಯನ್ನು ಹೆಚ್ಚಿಸಲಿಕ್ಕೂ, ಅವರಿಗೆ ಮಾರ್ಗದರ್ಶಕವಾಗಿರಲಿಕ್ಕೂ ಮುಂತಾದ ಉದ್ದೇಶಗಳಿಗಾಗಿ ಮೇಲ್ಕಂಡ ಸಂಸ್ಥೆಯು ಸ್ಥಾಪನೆಯಾಗಲಿಕ್ಕೆ ಯೋಜನೆ ನಡೆದಿದೆ.

ಈ ಸಂಘದ ಇತರ ಉದ್ದೇಶಗಳನ್ನು ಸಂಘದ "ಮೆಮೊರ್ಯಾಂಡಂ ಆಫ್ ಅಸೋಸಿಯೇಷನ್" ಒಳಗೆ ವಿವರವಾಗಿ ತೋರಿಸಲಾಗಿದೆ. ಬಳ್ಳಾರಿಯಲ್ಲಿರುವ ಸಂಘದ ಆಫೀಸಿನಲ್ಲಿ ಅದನ್ನು ಯಾರಾದರೂ ನೋಡಬಹುದು.

ಈ ಮನವೀ ಅರ್ಜಿಗೆ ತಕರಾರು ಮಾಡತಕ್ಕಂಥ ವ್ಯಕ್ತಿ, ಕಂಪೆನಿ, ಅಥವ ಕಾರ್ಪೊರೇಷನ್ ಯಾರಾದರೂ ಇದ್ದರೆ ಅಂಥವರು 5-2-48 ರೊಳಗಾಗಿ ಬರಹ ಮೂಲಕ ಮದ್ರಾಸು ಸರಕಾರದ ಡೆವಲಪ್ಮೆಂಟು ಖಾತೆಯ ಕಾರ್ಯದರ್ಶಿಯವರಿಗೆ ತಕರಾರು ಸಾದರುಪಡಿಸಬಹುದಾಗಿ ಈ ಮೂಲಕ ತಿಳಿಸೋಣಾಗಿದೆ.

ಮದ್ರಾಸು
22-12-47

(ಸಹಿ) ಕೆ. ಜಿ. ಮೊನಾನ್
ಮದ್ರಾಸು ಸರಕಾರದ ಡೆವಲಪ್ಮೆಂಟ್ ಖಾತೆಯ
ಜಾಯಿಂಟ್ ಸೆಕ್ರೆಟರಿ.

ಶ್ರೀ ಮೈಲಾರಲಿಂಗ ಸ್ವಾಮಿ ಭಕ್ತಾದಿಗಳಿಗೆ ಜಾತ್ರಾ ವಿಷಯ ಸೂಚನೆ

——

೧೯ಳಲ ಫೆಬ್ರವರಿ ೨೪ ನೇ ತಾರೀಖಿನ ದಿನ ಮಾಘ ಶು|| ಪೌರ್ಣಮಿ, ಇದೇ ಫೆಬ್ರವರಿ ೨೭ ನೇ ತಾರೀಖು ದಿನ ಶ್ರೀ ಮೈಲಾರಲಿಂಗ ಸ್ವಾಮಿ ಕಾರ್ಣಿಕೋತ್ಸವವು, ತಾ|| ೨೮ ನೇ ದಿನ ಶರಣೆನೇವಾ, ಬಾ ದಂಥ ಶ್ರೀ ಸ್ವಾಮಿಯ ಸಮಸ್ತ ಭಕ್ತವಹನೀಯರು ನಿಮ್ಮ ನಿಮ್ಮ ಹರಕೆ ಮಾಲು ವಸ್ತ್ರೆ ದೈವ ಕಾಣಿಕೆಯನ್ನು ಜಾಡ್ರಮ್ಮಿನಲ್ಲಿ ಹಾಕುವದು. ಅಥವ ಧರ್ಮಕರ್ತರಲ್ಲಿ ಒಪ್ಪಿಸಿ ಕಾಯುವಾದೆ ರಶೀದಿ ಪಡೆಯುವದು.

ಪ್ರಸಿದ್ಧಿಯಾದ ಶ್ರೀ ದೇವಾಲಯವು ಶಿಥಿಲವಾದ್ದರಿಂದ ಮದ್ರಾಸು ರಿಲಿಜಿಯಸ್ ಎಂಡೋಮೆಂಟ್ ಬೋರ್ಡಿನವರು ೧೯ಳಲ ರಲ್ಲಿ ಪ್ರತಿವರ್ಷ ಜಾತ್ರೆಯಲ್ಲಿ ದರ್ಶನಕ್ಕೆ ಬರತಕ್ಕ ಜನಗಳಿಗೆ ಪ್ರತಿಯೊಬ್ಬರಿಗೆ ೦-೨-೦ ಪ್ರಕಾರ ವಸೂಲ್ಮಾಡಿ ಪಾವತಿ ಕೊಡಲು ಆರ್ಡರ್ ಮಾಡಿದ್ದಾರೆ. ಮುಖ್ಯವಾಗಿ ದೇವಾಲಯವು ಜೀರ್ಣೋದ್ಧಾರವಾಗಬೇಕು. ತಾವುಗಳು ೦-೨-೦ ಯಂತೆ ಸಲ್ಲಿಸಿ ಶ್ರೀ ದೇವತಾಸೇವೆ ಮಾಡಿಕೊಂಡು ಪುಣ್ಯಭಾಗಿಗಳಾಗಬೇಕೆಂದು ವಿನಂತಿ. ಈ ರೀತಿ ಬಂದ ದ್ರವ್ಯ ಬ್ಯಾಂಕಿನಲ್ಲಿಡುತ್ತದೆ. ೫ ವರ್ಷದ ಹುಡಿಗರಿಗೆ ಮಾಫಿ ಇರುತ್ತದೆ.

ಶ್ರೀ ಮೈಲಾರಲಿಂಗಸ್ವಾಮಿ ಗುಡಿ
ವಂಶಪಾರಂಪರ್ಯ ಧರ್ಮಕರ್ತರಾದ
ಶ್ರೀಗುರು ಕಾಡಪ್ಪಯ್ಯ ಒಡೆಯರ್.
ಮೈಲಾರ

ವಿವಾಹ ಮಹೋತ್ಸವವು

೭-೧-೪೮ ಕಲ್ಲಿ ಮಧ್ಯಾಹ್ನ ೧೨ ಗಂಟೆಗೆ ಬಾಗಲಕೋಟೆಯಲ್ಲಿ ಶ್ರೀ ಜಂಗಿನ ಮುರಿಗೆಯ್ಯನವರ ಸುಪುತ್ರ ಚಿ|| ಸೋಮಶೇಖರಯ್ಯನಿಗೆ ಬಳ್ಳಾರಿಯ ಶ್ರೀ ಟಿ. ಎಚ್. ಎಂ. ಚಂದ್ರಶೇಖರಶಾಸ್ತ್ರಿ ಬಿ. ಎ., ಬಿ. ಎಲ್., ಇವರ ಸುಪುತ್ರಿ ಚಿ|| ಕುಂ. ಸೌ. ಲೀಲಾವತಿದೇವಿಯನ್ನು ಕೊಟ್ಟು ವಿವಾಹ ಮಹೋತ್ಸವವು ಬಹು ವಿಜೃಂಭಣೆಯಿಂದ ಜರುಗಿಸಲ್ಪಟ್ಟಿತು. ವಿವಾಹಕ್ಕೆ ಪುರದ ಪ್ರಮುಖರು, ಅಧಿಕಾರಿಗಳು, ವರ್ತಕರು, ಪಕೀಲರು ಅಲ್ಲದೇ ಪರಸ್ಥಳದಿಂದ [illegible] ರು. ವಿವಾಹವು ಸಾಂಗವಾಗಿ ಜರುಗಲಿಂದು ಅನೇಕ ಪ್ರಮುಖರಿಂದ ಶುಭಾಶಯ ಸಂದೇಶಗಳು ಬಂದಿದ್ದವು. ಶ್ರೀ ಜಂಗಿನ ಇವರು ಕರ್ನಾಟಕ ವಣಿಕ್ಸಂಘಕ್ಕೂ ಮತ್ತು ಕರ್ನಾಟಕಕ್ಕೂ ಈವರೆಗೂ ಸಲ್ಲಿಸಿದ ಅಪ್ರತಿಮ ಸೇವೆಗಾಗಿ ಕರ್ನಾಟಕ ವಣಿಕ ಸಂಘವು ಶ್ರೀ ಮುರಿಗೆಯ್ಯನವರಿಗೆ ಕಾಣಿಕೆಯಾಗಿ ಒಂದು ಸಾವಿರ ರೂ. ಗಳನ್ನು ಕಳಿಸಿಕೊಟ್ಟಿದ್ದಿತು. ವಿವಾಹ ಕಾಲದಲ್ಲಿ ಅಲ್ಲಿಯ ಶ್ರೀ ಬಸವೇಶ್ವರ ವಿದ್ಯಾವರ್ಧಕ ಸಂಘಕ್ಕೂ ಮತ್ತು ಅಕ್ಕನ ಬಳಗಕ್ಕೂ ಅನುಕ್ರಮವಾಗಿ ವರನ ಕಡೆಯಿಂದ ೫೫ ರೂ ಪಾಯಿಗಳು ೨ರೂ. ೫೦ ಗಳು ವಧುವಿನ ಕಡೆಯಿಂದ ರೂ. ೧೦ ಗಳ ಮತ್ತು ರೂ. ೧೫ ಗಳು ಕೊಡಲ್ಪಟ್ಟವು.

ಪ್ರತ್ಯಕ್ಷದರ್ಶಿ

ಯಥಾಸ್ಥಿತಿ ಒಪ್ಪಂದದ ೨ ನೇ ಮುರಿತವು

ಯಥಾಸ್ಥಿತಿ ಒಪ್ಪಂದದ ವಿರುದ್ಧವಾಗಿ ಇಂಡಿಯಾ ಯೂನಿಯನ್ ಸರಕಾರಕ್ಕೆ ತಿಳಿಸದಲೇ ನೈಜಾಮರು ರೂ. ೨೫ ಕೋಟಿಗಳನ್ನು ಪಾಕಿಸ್ತಾನ ಸರಕಾರಕ್ಕೆ ಸಾಲವಾಗಿ ಕೊಡಲು ಒಪ್ಪಿರುವರಂತೆ. ಇದರ ನಿಜಸ್ಥಿತಿಯನ್ನು ಅರಿತುಕೊಳ್ಳಬೇಕೆಂದು ಕೇಂದ್ರ ಸರಕಾರವು ತಮ್ಮ ಏಜಂಟ ಜನರಲ್ ಶ್ರೀ ಮುನಿಶಿಯವರಿಗೆ ಉತ್ತರ ಮಾಡಿರುವದು. ಇದು ನಿಜವಿದ್ದ ಪಕ್ಷದಲ್ಲಿ ನೈಜಾಮರ ವಿರುದ್ಧ ಆರ್ಥಿಕ ದಿಗ್ಬಂಧನೆ ಕಾರ್ಯಕ್ರಮವು ಕೈಕೊಳ್ಳಲ್ಪಡುವದು. ಈ ಹಣವು ನೈಜಾಮರ ಖಾಸಗೀ ಹಣವಲ್ಲವೆಂತಲೂ ಪ್ರಜೆರಿಗೆ ಯಾವ ಉಪಯೋಗವನ್ನು ಮಾಡದೇ ಪ್ರಜರಿಂದ ಎತ್ತಲ್ಪಟ್ಟ ಹಣವಾದ್ದರಿಂದ, ಹೈದರಾಬಾದಿನ ಶಾಸನ ಸಭೆಯ ಅನುಮತಿ ಇಲ್ಲದಲೇ ಈ ಹಣವನ್ನು ಪಾಕಿಸ್ತಾನಕ್ಕೆ ಕೊಡಬಾರದಾಗಿ ಅಲ್ಲಿಯ ಪ್ರಜರು ಆಂದೋಳನ ಮಾಡಹತ್ತಿರುವರು. ಇತ್ತೀಚಿಗೆ ಸುಮಾರು ೧೭ ಹಳ್ಳಿಗಳು ನೈಜಾಮರ ಆಳಿಕೆಯನ್ನು ಧಿಃಕರಿಸಿ ಸ್ವಾತಂತ್ರ್ಯವನ್ನು ಪ್ರಕಟಿಸಿ ಹಿಂದೀ ಒಕ್ಕೂಟವನ್ನು ಸೇರಿವೆ. ಇನ್ನು ೪-೫ ತಿಂಗಳಲ್ಲಿ ನೈಜಾಮರ ಆಳಿಕೆಯು ಕುಸಿದು ಬೀಳುವದರಲ್ಲಿದೆ.

ಪಾಕಿಸ್ತಾನಕ್ಕೆ ಮುಧ್ಯಪೂರ್ವದ ಸಹಾನುಭೂತಿ

ಮಧ್ಯಪೂರ್ವದ ಇರಾಣ, ಇರಾಕ ದೇಶಗಳಲ್ಲಿ ಭಾರತದ ಬಗ್ಗೆ ಆಕ್ರೋಶ ಮಾಡುತ್ತಲಿವೆ. ಪಾಕಿಸ್ತಾನದ ಬಗ್ಗೆ ಸಹಾನುಭೂತಿ ತೋರಿಸುತ್ತಲಿವೆ. ಆ ದೇಶಗಳಲ್ಲಿರುವ ಹಿಂದೀಯರನ್ನು ಹಾಮಿಯಾಗಿ (ಹಾಸ್ಟೇಜಿಸ್) ಇಟ್ಟುಕೊಳ್ಳಬೇಕೆಂದು ಅಲ್ಲಿಯ ಪತ್ರಿಕೆಗಳು ಬರೆಯಹತ್ತಿವೆ. ವ್ಯಾಪಾರಾದಿ ಸಂಬಂಧವನ್ನು ಕಡಿದುಕೊಳ್ಳಬೇಕೆಂದು ಹೇಳಿಕೊಡುತ್ತಲಿವೆ. ಅಲ್ಲದೇ ಯು. ನೋ. ದಲ್ಲಿ ಸೇರಲು ಪ್ರಯತ್ನಿಸಿದ ಐರ್ಲಾಂಡು ವಿರುದ್ಧ ಭಾರತದ ಪ್ರತಿನಿಧಿ ವಿಜಯಲಕ್ಷ್ಮಿ ಪಂಡಿತ ಇವರು ತಮ್ಮ ಅಣ್ಣನ ಸಲಹೆ ತೆಗೆದುಕೊಳ್ಳದೇ ಇಂಡಿಯಾದ ಮತವನ್ನು ಕೊಟ್ಟದ್ದರಿಂದ ಐರ್ಲಾಂಡು ಪತ್ರಿಕೆಗಳೆಲ್ಲವೂ ಭಾರತದ ವಿರುದ್ಧ ಮತ್ತು ಪಾಕಿಸ್ತಾನಕ್ಕೆ ಅನುಕೂಲವಾಗಿ ಪ್ರಚಾರ ಮಾಡಹತ್ತಿವೆ. ಐರ್ಲಾಂಡು ಇದುವರೆಗೂ ಇಂಡಿಯಾದ ಬಗ್ಗೆ ನ್ಯೂಟ್ರಿಯಿಂದ ಇದ್ದರೂ ಯು. ನೋ. ದಲ್ಲಿ ತನ್ನ ವಿರುದ್ಧ ಇಂಡಿಯಾವು ಏಕೆ ಮತ ಕೊಟ್ಟತೆಂದು ಕೇಳಹತ್ತಿವೆ. ನೆಹ್ರೂರವರ "ಯೋಗ್ಯತೆ" ಯುಳ್ಳ ರಾಯಭಾರಿ ಮತ್ತು ಪ್ರತಿನಿಧಿಗಳ ನೇಮಣೂಕದ ಫಲವಿದು! ಐರ್ಲಾಂಡು ವಿರುದ್ಧ ಇಂಡಿಯಾವು ಯು. ನೋ. ದಲ್ಲಿ ಏಕೆ ಮತಕೊಟ್ಟೆಂದು ಇದುವರೆಗೂ ಕೇಂದ್ರ ಶಾಸನ ಸಭೆಯಲ್ಲಿ ಯಾವ ಸದಸ್ಯನೂ ನೆಹ್ರೂರವರನ್ನು ಕೇಳಲ್ಲ!!

....—

ಕಡಿಮೆ ಆಹಾರದಿಂದ ಹೆಚ್ಚು ಕಾಲ ಬಾಳುವಿಕೆ

ಮನುಷ್ಯನು ಕಡಿಮೆ ಆಹಾರ ತೆಗೆದುಕೊಳ್ಳುತ್ತ ಬಂದರೆ ಅವನು ಹೆಚ್ಚು ಕಾಲ ಬಾಳುವರೆಂದು ಅಮೇರಿಕನ್ನರು ಇಲಿಗಳ ಮೇಲೆ ಶೋಧನೆ ಮಾಡಿ ಪ್ರಕಟಿಸಿರುವರು. ಇವರು ಒಂದು ಶೋಧನಾಲಯದಲ್ಲಿ ೧೫೪ ಇಲಿಗಳಿಗೆ ಹೆಚ್ಚು ಆಹಾರವನ್ನು ಒಂದು ವರ್ಷದವರೆಗೆ ಕೊಡುತ್ತ ಬಂದು ನಂತರ ವರ್ಷಾಂತ್ಯದಲ್ಲಿ ಕಡಿಮೆ ಆಹಾರವನ್ನು ತೆಗೆದುಕೊಳ್ಳುತ್ತಿದ್ದ ಇಲಿಗಳ ಮರಣ ಇದ್ದಿಲ್ಲವಂತೆ. ಹೆಚ್ಚು ಆಹಾರ ತೆಗೆದುಕೊಳ್ಳುತ್ತಿದ್ದ ಇಲಿಗಳ ಸಂಖ್ಯೆಯಲ್ಲಿ ಅರ್ಧದಷ್ಟು ಕಡಿಮೆ ಆಗಿದ್ದವಂತೆ. ಅಲ್ಲದೇ ಕಡಿಮೆ ಆಹಾರದ ಇಲಿಗಳಲ್ಲಿ ಹೆಚ್ಚು ಜನನ ಸಂಖ್ಯೆ ಇದ್ದಿತಂತೆ. ಹೆಚ್ಚು ಆಹಾರದ ಇಲಿಗಳಲ್ಲಿ ಜನನ ಸಂಖ್ಯೆಯೇ ಇರಲಿಲ್ಲವಂತೆ.

.....

ಪಾಕಿಸ್ತಾನದ ಮೇಲೆ ಆರ್ಥಿಕ ದಿಗ್ಬಂಧನೆ

ಇಂಡಿಯಾ ಒಕ್ಕೂಟ ಸರಕಾರವು ಕಾಶ್ಮೀರ ದುರಂತವನ್ನು ಯು. ನೋ. ಸಂಘಕ್ಕೆ ತಿಳಿಸಿ ಪಾಕಿಸ್ತಾನವು ಕಾಶ್ಮೀರದ ಸಂಬಂಧವನ್ನು ಹರಿದುಕೊಳ್ಳದೇ ಹೋದರೆ ಅದರ ವಿರುದ್ಧ ಆರ್ಥಿಕ ವ್ಯೆರಾ ದಿಗ್ಬಂಧನ ಕಾರ್ಯಕ್ರಮವನ್ನು ತೆಗೆದುಕೊಳ್ಳಬ[illegible]

ಸ್ಟರ್ಲಿಂಗ ಸಂಧಾನದಲ್ಲಿ ಭಾಗವಹಿಸಲು ಪಾಕಿಸ್ತಾನದ ನಕಾರ

ಪಾಕಿಸ್ತಾನವು ಕಾಶ್ಮೀರದ ದಾಳಿಗಾರರಿಗೆ ಸಹಾಯ ಮಾಡುವದನ್ನು ನಿಲ್ಲಿಸದ ಹೊರತು ಅದಕ್ಕೆ ಕೊಡಬೇಕಾದ ಅವರ ಹಿಸ್ಸೆ ರೂ. ೫೫ ಕೋಟಿಗಳನ್ನು ಕೊಡಲು ಹಿಂದೀ ಸರಕಾರವು ನಿರಾಕರಿಸಿದೆ. ಆ ನೊತ್ತವನ್ನು ಪಾಕಿಸ್ತಾನದ ಪರ ಜಮಾ ಕಟ್ಟಿಸಿಕೊಳ್ಳಲು ರಿಝರ್ವ ಬ್ಯಾಂಕು ಸಹ ನಿರಾಕರಿಸಿರುವದರಿಂದ ಇಂಗ್ಲಂಡು ಇಂಡಿ[illegible] ನಾತುಕತೆ ನಡೆಸಲು [illegible] ಬಂದಿರುವ ಬ್ರಿಟಿಶ ಶಿಷ್ಟಮಂ[illegible]ಡನೆ ಒಪ್ಪಂದ ನಡೆಸಲು ಪಾಕಿಸ್ತಾ[illegible] ನಿರಾಕರಿಸಿದೆ.

——

ಕರಾಚಿಯಲ್ಲಿ ಟಿಳಕ, ಗಾಂಧಿ ಪುತ್ಥಳಿಗಳಿಗೆ ಅವಮಾನಕಾರಕ ಕೃತ್ಯಗಳು

ಕರಾಚಿಯಲ್ಲಿ ಟಿಳಕ, ಗಾಂಧಿಯವರ ಪುತ್ಥಳಿಗಳಿವೆ. ಟಿಳಕ ಪುತ್ಥಳಿಯ ಮೇಲೆ ಪಾಕಿಸ್ತಾನದ ಧ್ವಜವು ಏರಿಸಲ್ಪಟ್ಟಿದೆ. ಅದು ಪುತ್ಥಳಿಯ ಕೊರಳಿಗೆ ಹಗ್ಗದಿಂದ ಬಿಗಿಯಾಗಿ ಕಟ್ಟಲ್ಪಟ್ಟಿದೆ. ಗಾಂಧಿಯವರ ಪುತ್ಥಳಿಗೆ ಟರ್ಕಿ ಟೊಪ್ಪಿಗೆ ಹಾಕಲ್ಪಟ್ಟಿದೆ. ಮತ್ತು ಪುತ್ಥಳಿಯು ಕೆಲ ಭಾಗಗಳು ಕೂಡಿಸಲ್ಪಟ್ಟವೆ.

ಗನೇ ಕಿಡಿ ನೋಡಿರಿ!

ಮಕ್ಕಳ ಅಪೂರ್ವ

ತಮ್ಮ ಮನೆಗಳಲ್ಲಿ ಹುಟ್ಟಿದ ಮಕ್ಕ
ಳ ಜನನ ಕಾಲವನ್ನು ಸ್ಥಿರಮಾಡಿಕೊಂಡು
ರ್ದಶಾ ಮುಂತಾದವುಗಳನ್ನು ಮಾಡಿಕೊಂ
ಪ್ಪನವನ್ನು ನೋಡಿ ಇದ್ದರೆ ಪರಿಹಾರವಾಗುವ
ಬಾಲಕನಿಗೆ ಮುಂದೆ ಎಷ್ಟೆಷ್ಟನೇವರ್ಷಗಳಲ್ಲಿ
ವ ವಿಷಯವನ್ನು ಬಾಲಕನ ವಿದ್ಯಾ ಭಾಗ್ಯ
ರು ಸಂಪಾದಿಸಿಟ್ಟ ಧನಪ್ರಾಪ್ತಿಯಾಗುವ ವಿಷ
ಯಾವ ಮೂಲಕ ದೇಹಪೀಡೆಗಳುಂಟಾಗುವ
ಡುವ ವಿಷಯವನ್ನು ತಂದೆಗೆ ಯಾವ ಯಾವ
ಪ್ಪನಷ್ಟಗಳನ್ನು ದೇಹಪೀಡಾನಿವಾರಕ ತೆ
ಯಾಣದ ಮಾರ್ಗದಲ್ಲಿ ಅಕಸ್ಮಾತ್ ಅನಾಹ
ಮುಂತಾದ ಜರುಗುವ ಶುಭಾಶುಭ ಫಲಗಳನ
ಯಾರು ಮಾಡಿ ಜಾತಕ ಪತ್ರಿಕೆಯ ಸಂಗಡ
ಹಾರ ಮುಂತಾದ ಪ್ರಯತ್ನ ಕಾರ್ಯಗಳಿಗೆ
ಉಂಟಾಗುವದನ್ನು ಮುಂಚಿತವಾಗಿ ತಿಳಿದ
ಗಳಲ್ಲಿ ಖರೀದಿ ಮಾಡಿದ ಪದಾರ್ಥಗಳು ಮ
ಳಿದುಕೊಳ್ಳುವ ವಿಷಯವನ್ನು ಬಾಲಕನಿಗೆ
ಪೀಡೆಗಳು ಪರಿಹಾರವಾಗುವದಕ್ಕೆ "ಬಾಲಗ್ರ
ಕೊಡುತ್ತೇನೆ.

ಯಂತ್ರ ಸಹಿತ ಜಾತಕ ೩
ಏಳಾಸೆ ಸೆಕ್ಕ
ಪೋ-೬

ಕಾಶ್ಮೀರ ದಾಳಿಯ ಹಿಂದೆ ಭಾರತದ ಮುಸ್ಲೀಮ ಮೌನ

ಭಾರತದಲ್ಲಿಯ ನ್ಯಾಶನಲಿಸ್ಟ ಮತ್ತು
ಗಿನ ಮುಸ್ಲೀಮರು ಭಾರತದ ಕರಣಾ
ತೆಯುಳ್ಳವರಾಗಿರಬೇಕೆಂದು ಸಾರ
ರೂ, ಇನುವರೆಗೂ ಭಾರತದ ಒ
ಮುಸ್ಲೀಮನಾದರೂ ಒಂದು ಮುಸ್ಲೀ
ಂಸ್ಥೆಯೆಂದರೂ ಆಥವ ಒಂದು ಮು
ಲೀಂ ಪರಿಷತ್ತಾದರೂ ಕಾಶ್ಮೀರದ ಮೇಲಿ
ಪಾಕಿಸ್ಥಾನದ ದಾಳಿಯನ್ನಾಗಲೀ, ಅಲ್ಲಿ
ರು ಮುಸ್ಲೀಮ ಜನರ ಕೊಲೆ, ಮುಸ್ಲೀ
ಮುಸ್ಲೀ ಮಾನಾಪಹರಣ, ಮುಸ್ಲೀಮರ
ತ್ತ ನಷ್ಟ ಮುಂತಾದವುಗಳ ಬಗೆಗೆ ಒಂ
ು ಚಕಾರವನ್ನಾದರೂ ಉಚ್ಚರಿಸಿದಂತೆ
ಂಡು ಬರುವದಿಲ್ಲ. ಕಾಶ್ಮೀರದ ಮುಸ್ಲಿ
ರ ಬೆಂಬಲಕ್ಕೆ ಭಾರತದ ಸರಕಾರವು
ತಿದಿನ ೪-೫ ಲಕ್ಷ ರೂಪಾಯಿಗಳನ್ನು
ರ್ಚ ಮಾಡಹತ್ತಿದ್ದರೂ ಭಾರತದ ನೆ
ಾಸ್ಪದವಾದವನ್ನೂ ಭಾರತದ ಮುಸ್ಲೀ
ಯರು ಪ್ರಶಂಸಿಸಿರುವದಿಲ್ಲ. ಕಾಶ್ಮೀರದ
ಗೆಗೆ ಭಾರತದ ಮುಸ್ಲೀಮರು ಈ ತ್ಯ
ನ್ಯಾಯ ವೃತ್ತಿಯು ತಾಟಸ್ಥ್ಯ ಮನೋ
ವವು ಗಮನಾರ್ಹವಾಗಿದೆ. ಮತ್ತು
ರೆಕ ದೃಷ್ಟಿಯು ಯಾವ ಕಡೆಗೆ ಇರುವ
ಬುದು ತಿಳಿಯಬರುತ್ತದೆ. ಪರಿಸ್ಥಿತಿ
ು ಹೀಗಿದ್ದರೂ ಭಾರತದ ಮುಖಂಡ
ಮುಂದೆ ಭಾರತವು-ಪಾಕಿಸ್ಥಾನಗಳು
ದಗುವವು. ಆದಕಾಗಿ ದುಡಿಯುವೇ
ರು ಹೇಳಹತ್ತಿ ಎವರು! ಎಥಿಯೋಪಿ
ಯ ತನ್ನ ಬಣ್ಣವನ್ನು ಬಡಲಾಯಿಸಿ

ಗನೇ ಓದಿ ನೋಡಿರಿ! ಸಮಸ್ತರ ಅಪೂರ್ವ ಲಾಭಕಾಲ!!

ಮಕ್ಕಳ ಅಪೂರ್ವ ಜಾತಕ ಪತ್ರಿಕೆ

ತಮ್ಮ ಮನೆಗಳಲ್ಲಿ ಹುಟ್ಟಿದ ಮಕ್ಕಳ ಜನನ ಟಿಪ್ಪಣಿಗಳನ್ನು ಕಳಿಸಿದರೆ ನಾವು ಜನನ ಕಾಲವನ್ನು ಸ್ಥಿರಪಡಿಸಿಕೊಂಡು ಜನನಕುಂಡಲಿ, ಅಂಶಕುಂಡಲಿ, ಮಹದ್ದಶಾ ಮುಂತಾದವುಗಳನ್ನು ಮಾಡಿಕೊಂಡು ಜನನವಾದ ನಕ್ಷತ್ರದೋಷ ಬಾಲಾರಿಷ್ಟವನ್ನು ನೋಡಿ ಇದ್ದರೆ ಪರಿಹಾರವಾಗುವದಕ್ಕೆ ಮಾಡತಕ್ಕ ಶಾಂತಿ ವಿಷಯವನ್ನು ಬಾಲಕನಿಗೆ ಮುಂದೆ ಎಷ್ಟೆಷ್ಟನೇವರ್ಷಗಳಲ್ಲಿ ಯಾವ ಮೂಲಕ ಕಂಟಕಗಳು ಜರುಗುವ ವಿಷಯವನ್ನು ಬಾಲಕನ ವಿದ್ಯಾ ಭಾಗ್ಯ ರಾಜಯೋಗಾದಿ ವಿಷಯಗಳನ್ನು ಹಿರೇರು ಸಂಪಾದಿಸಿಟ್ಟ ಧನಪ್ರಾಪ್ತಿಯಾಗುವ ವಿಷಯವನ್ನು ಬಾಲಕನ ತಾಯಿಗೆ ಯಾವ ಯಾವ ಮೂಲಕ ದೇಹಪೀಡೆಗಳುಂಟಾಗುವ ವಿಷಯವನ್ನು ಪರಿಹಾರಕ್ಕೆ ಶಾಂತಿ ಮಾಡುವ ವಿಷಯವನ್ನು ತಂದೆಗೆ ಯಾವ ಯಾವ ಮೂಲಕ ಲಾಭ ಸುಖ ಸಂತೋಷ ಕಷ್ಟನಷ್ಟಗಳನ್ನು ದೇಹಪೀಡಾದಿ ವಿರೋಧ ತೆ ಂದರೆಗಳುಂಟಾಗುವ ವಿಷಯವನ್ನು ಪ್ರಯಾಣದ ಮಾರ್ಗದಲ್ಲಿ ಅಕಸ್ಮಾತ್ ಅನಾಹುತಗಳುಂಟಾಗುವ ವಿಷಯವನ್ನು ಇನ್ನು ಮುಂತಾದ ಜರುಗುವ ಶುಭಾಶುಭ ಫಲಗಳನ್ನು ಬರೆದು ಜಾತಕ ಪತ್ರಿಕೆಯನ್ನು ತಯಾರು ಮಾಡಿ ಜಾತಕ ಪತ್ರಿಕೆಯ ಸಂಗಡ ಬಾಲಕನ ತಂದೆಯು ವ್ಯಾಪಾರ ವ್ಯವಹಾರ ಮುಂತಾದ ಪ್ರಯತ್ನ ಕಾರ್ಯಗಳಿಗೆ ಮನೆಯಿಂದ ಹೊರಡುವಾಗ ಅನಿಷ್ಟವಾಗುವದನ್ನು ಮುಂಚಿತವಾಗಿ ತಿಳಿದುಕೊಳ್ಳುವ ವಿಷಯವನ್ನು ಆಯಾಯ ತಿಂಗಳಲ್ಲಿ ಖರೀದಿ ಮಾಡಿದಿ ಪದಾರ್ಥಗಳು ಮುಂದೆ ತೇಜಿ ಮಂದಿ ಉಂಟಾಗುವದನ್ನು ತಿಳಿದುಕೊಳ್ಳುವ ವಿಷಯವನ್ನು ಬಾಲಕನಿಗೆ ಉಂಟಾಗುವ ಬಾಲಗ್ರಹ ಮುಂತಾ ಎಲ್ಲ ಪೀಡೆಗಳು ಪರಿಹಾರವಾಗುವದಕ್ಕೆ ಬಾಲಗ್ರಹ ನಿವಾರಣೆ ಯಂತ್ರವನ್ನು ಸಹಾ ಕಳಿಸಿಕೊಡುತ್ತೇವೆ.

ಯಂತ್ರ ಸಹಿತ ಜಾತಕ ಪತ್ರಿಕೆಯ ಚಾರ್ಜು ೧೦ ರೂ.

ವಿಳಾಸ- ಸೆಕ್ರೆಟರಿ ಪ್ರಪಂಚದಗುಟ್ಟು ಕಾರ್ಯಾಲಯ
ಪೋ-ಹರಪನಹಳ್ಳಿ (ಜಿಲ್ಲಾ ಬಳ್ಳಾರಿ)

ಕಾಶ್ಮೀರ ದಾಳಿಯ ಬಗ್ಗೆ ಭಾರತದ ಮುಸ್ಲೀಮರ ಮೌನ

ಭಾರತದಲ್ಲಿಯ ಸ್ವಾತಂತ್ರ್ಯಲಿಪ್ಸು ಮತ್ತು ದೇಶಭಕ್ತಿಗಿನ ಮುಸ್ಲೀಮರು ಭಾರತದ ಪ್ರಜಾಸತ್ತಾತ್ಮಕ ಸರಕಾರಕ್ಕೆ ನಿಷ್ಠೆಯುಳ್ಳವರಾಗಿರಬೇಕೆಂಬ ಸಾರ್ವತ್ರಿಕ ಅಭಿಪ್ರಾಯವಿದ್ದರೂ, ಇನ್ನುವರೆಗೂ ಭಾರತದ ಒಬ್ಬ ಮುಸ್ಲೀಮನಾದರೂ ಒಂದು ಮುಸ್ಲೀಮ್ ಸಂಸ್ಥೆಯಾಗಲಿ ಅಥವ ಒಂದು ಮುಸ್ಲೀಂ ಪರಿಷತ್ತಾದರೂ ಕಾಶ್ಮೀರದ ಮೇಲಿನ ಪಾಕಿಸ್ತಾನದ ದಾಳಿಯನ್ನಾಗಲೀ, ಅಲ್ಲಿಯ ಮುಸ್ಲೀಮ ಜನರ ಕೊಲ್ಲೆ, ಮುಸ್ಲೀಮ್ ಸ್ತ್ರೀ ಮಾನಾಪಹರಣ, ಮುಸ್ಲೀಮರ ವಿತ್ತ ನಷ್ಟ ಮುಂತಾದವುಗಳ ಬಗೆಗೆ ಒಂದು ಚಕಾರವನ್ನಾದರೂ ಉಚ್ಚರಿಸಿದ್ದಂತೆ ಕಂಡು ಬರುವದಿಲ್ಲ. ಕಾಶ್ಮೀರದ ಮುಸ್ಲಿಮರ ಬೆಂಬಲಕ್ಕೆ ಭಾರತದ ಸರಕಾರವು ಪ್ರತಿದಿನಕ್ಕೆ ೪-೫ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಹತ್ತಿದ್ದರೂ ಭಾರತದ ನೆಹ್ರೂ ಸರಕಾರವನ್ನು ಭಾರತದ ಮುಸ್ಲೀಮರು ಪ್ರಶಂಸಿಸಿರುವದಿಲ್ಲ. ಕಾಶ್ಮೀರದ ಬಗೆಗೆ ಭಾರತದ ಮುಸ್ಲೀಮರ ಈ ತ್ಟಸ್ಥ ವೃತ್ತಿಯು ತಾಟಸ್ಥ್ಯ ಮನೋಭಾವವು ಗಮನಾರ್ಹವಾಗಿದೆ. ಮತ್ತು ಅವರ ದೃಷ್ಟಿಯು ಯಾವ ಕಡೆಗೆ ಇರುವದೆಂಬುದು ತಿಳಿಯಬರುತ್ತದೆ. ಪರಿಸ್ಥಿತಿಯು ಹೀಗಿದ್ದರೂ ಭಾರತದ ಮುಖಂಡರು ಮುಂದೆ ಭಾರತವು-ಪಾಕಿಸ್ತಾನಗಳು ಒಂದಾಗುವವು. ಅನಕಾಗಿ ದುಡಿಯಬೇಕೆಂದು ಹೇಳುತ್ತಿರುವರು! ಎಥಿಯೋಪಿಯನ್ ತನ್ನ ವರ್ಣವನ್ನು ಬದಲಾಯಿಸಿಕೊಳ್ಳಬಲ್ಲನೇ? ಚಿರ್ಚವು ತನ್ನ ಬಣ್ಣದ ಚರ್ಮವನ್ನು ಬದಲಾಯಿಸಿಕೊಳ್ಳಬಲ್ಲದೇ? ಜಾತಿಯ ಮುಖಂಡರು ನಾವ್ರ ಈ ವರ್ಣವನ್ನು ಬದಲಾಯಿಸಲು ಪ್ರಯತ್ನಿಸುತ್ತಿರುವರು! ಯಾವ ಪ್ರಯತ್ನದಲ್ಲಿ ಅವರನು ಅಯಶ್ವಸಿಯಾದನೋ ಆ ಪ್ರಯತ್ನವನ್ನೇ ಭಾರತದ ಕಾಂಗ್ರೆಸ್ ಮುಖಂಡರು ಈಗ ಮಾಡಹತ್ತಿರುವರು!!

——

ಸದ್ಭಕ್ತರ ಹಸ್ತದಿಂದ ಮದುವೆ

ಹೆಬ್ಬಳ್ಳಿ ಜಿ. ಧಾರವಾಡ

ತಾ|| ೩-೧-೪೮ ನೇ ಶನಿವಾರ ದಿವಸ ಹೆಬ್ಬಳ್ಳಿಗ್ರಾಮದ ಪ್ರಸಿದ್ಧ ಶಿವಾನುಭವಿಗಳಾದ ಶ್ರೀ ಬಸಪ್ಪನವರು ಧಾರವಾಡ ನಿವಾಸಿ ಶ್ರೀ ಸಂಕಪ್ಪ ಕೊಂಗಿ ಇವರ ಅಧಿಪತ್ಯದಲ್ಲಿ ಶ್ರೀ ಚನ್ನಪ್ಪನವರ ಕಡೆಯವರಿಗೆ ಕಡೆಕೊಪ್ಪದ ಶ್ರೀ ಗೌರಪ್ಪನ ದೊಡ್ಡನು ಇವರ ಮಗಳು ಗದಿಗೆವ್ವನನ್ನು ಕೊಟ್ಟು ಈ ವಿವಾಹವು ಹುಬ್ಬಳ್ಳಿಯ ಶ್ರೀ ಗುರುಬಸವ ಮಂಟಪದ ಚಾಲಕರಾದ ಶ್ರೀ ಮಲ್ಲೇಶಪ್ಪ ಸಾದರಹಳ್ಳಿ ಇವರಿಂದ ಶಿವಶರಣರ ಪದ್ಧತಿಯಂತೆ ಅಕ್ಕಿಪ್ಪ ಖಚ್ಚಿತನಲ್ಲಿ ಶ್ರೀ ಶಂಕರಪ್ಪ ಬನ್ನಿಗಿಡದ ಇವರ ಸುರುತ್ವದಿಂದ ಜರುಗಿತು.

ಇದರಲ್ಲಿ ಉಪಯೋಗಿಸಿದ ಕನ್ನಡ ಮಂತ್ರಗಳು ಮಾಮೂಲಾಗಿಯೂ ಬೋಧಪ್ರದವಾಗಿಯೂ ಇದ್ದು ಬಸವಾದಿ ಪ್ರಮಥರ ಕಾಲವನ್ನು ನೆನಪಿಗೆ ತಂದುಕೊಡುವಂತೆ ಇದ್ದವು.

ಮೂಗಪ್ಪ ಬಸಪ್ಪ ಕೂಗಿ

ಜಾಹೀರ ನೋಟೀಸು

ಇದರಿಂದ ಸಮಸ್ತರಿಗೆ ತಿಳಿಯಪಡಿಸುವದೇನಂದರೆ- ಮೀರಾಕೊರನಹಳ್ಳಿ ಗ್ರಾಮದ ಪೆಡ್ಯೂಲು ದಾಖಲಾ ಆಸ್ತಿಗಳು ನಮ್ಮಗಳ ಹಕ್ಕು ಅನುಭವ ಅಧೀನದಲ್ಲಿದ್ದವು. ಸದ್ರಿ ಆಸ್ತಿಗಳು ನಮ್ಮ ಚಿಗಪ್ಪ ಕರಿಗುಡ್ಡಪ್ಪನವು ಇದ್ದು, ಆತ ಪೋತಿ ಆದ ಅನಂತರ, ಆತ ಸಾಯುವದಕ್ಕೆ ಮುಂಚೆ ಒಂದು ವರ್ಷದ ಲಾಗಾಯಿತು ಇಟ್ಟುಕೊಂಡಿದ್ದ ಬಸವ್ವ ಅಂಬುವ ಅಕೆಯ ಜೀವನಾಂಶಕ್ಕಾಗಿ ನಾಲ್ವರ ಹೇಳಿಕೆ ಪ್ರಕಾರ ಬಿಟ್ಟುಬಿಡ್ರಿ. ಅಕೆಗೆ ಆ ಆಸ್ತಿಗಳನ್ನು ಪರಾಧೀನ ಮಾಡಲು ಯಾವ ಹಕ್ಕು ಇರುವದಿಲ್ಲ. ಅಕೆಗೆ ಪೋತಿ ಕರಿಗುಡ್ಡಪ್ಪನಿಂದ ಯಾವ ಮಕ್ಕಳು ಆಗಿಲ್ಲ. ಪೋತ ಸರಿ ಅಕೆ ಕಲಿಯುವದರೊಳಗಾಗಿ ಬೀರಿಯವರಿಗೆ ಹುಟ್ಟಿದ ದೊಡ್ಡ ಹುಡುಗೆಯು ಸಹಾ ಅಕೆಯ ಹತ್ತರ ಇರುತ್ತಾಳೆ. (ಕೆಂಗಾಣವ್ವ) ಹೀಗಿಹ್ದು ಸದ್ರಿ ಬಸವ್ವನು ಇತರರಿ ದುರ್ಬೋಧನೆಗೊಳಪಟ್ಟು ದುರ್ನಡತೆಗೆ ಬಿದ್ದು ಸದ್ರಿ ಆಸ್ತಿಗಳನ್ನು ಪರಾಧೀನ ಮಾಡಬೇಕೆಂದು ಆಲೋಚಿಸಿದಂತೆ ಕಂಡು ಬಂದಿದೆ. ಆದ ಕಾರಣ ಸದ್ರಿ ಆಸ್ತಿಗಳನ್ನು ಯಾರೂ ಆಯಕ ಖರೀದಿ ವಗೈರಾ ಪರಾಧೀನ ಮಾಡಿಸಿಕೊಳ್ಳಬಾರದೆಂದು ಸೂಚಿಸೋಣವಾಗಿದೆ. ಮಾಡಿಸಿಕೊಂಡಲ್ಲಿ ಮುಂದಾಗುವ ಖರ್ಚು ವಗೈರಾ ಲುಕ್ಸಾನುಗಳಿಗೆ ಬಾಧ್ಯರಾಗುವರೆಂಬುವದಾಗಿ ಖಂಡಿತ ನಂಬತಕ್ಕದ್ದು.

ಪೆಡ್ಯೂಲು

ಬಳ್ಳಾರಿ ಜಿಲ್ಲಾ ಹರಪನಹಳ್ಳಿ ತಾಲೂಕ ಬಸಾಪುರ ಮಜರಾ ಮೀರಾಕೊರನಹಳ್ಳಿ ಗ್ರಾಮಕ್ಕೆ ಸೇರಿದ

ಸ. ನಂ.	೩೦ A.	೦-೮೭	೦-೮-೦
,,	,, C.	೦-೬೩	೦-೬-೦
,,	೨೮ C.	೧-೮೩	೧-೧೦-೦

ಉತ್ತರ ಬಾಗಿಲು ಮಾಳ್ಗಿ ಮನಿ ದನದಕ್ಕೆ ಆವರಣ ಸಹಾ ಉದಾರ ದಿ| ಹುಲಿಕಟ್ಟಿ ಚಿಕ್ಕಪ್ಪನ ಜಾಗ ಪೂ| ಪಿಂಜಾರಾ ಬುಡ್ಡವ್ವನ ಮನಿ ಪ| ಮಂಡಪ್ಪನ ಮನಿ ಒಂಮು-ಖಣ.

ಹುಲಿಕಟ್ಟಿ ಚಿಕ್ಕಪ್ಪ
ಹುಲಿಕಟ್ಟಿ ಮಂಡಪ್ಪ
ಎ. ನಾರಾಯಣಭಟ್ಟ
ಅಡ್ವೋಕೇಟ್
ಹರಪನಹಳ್ಳಿ ೭-೧-೪೮

ಅರೋಪ-ಪ್ರತ್ಯಾರೋಪ

ಕೇಂದ್ರ ಸರಕಾರವು ಕಾಶ್ಮೀರದ ಪ್ರಶ್ನೆಯನ್ನು ಯು. ನೋ. ದ ಭದ್ರತಾ ಸ್ಥಿತಿಗೆ ಕಳಿಸಿದೆ. ನೆಹರೂರವರು ಈ ಬಗ್ಗೆ ಪತ್ರಿಕಾ ಪ್ರತಿನಿಧಿಗಳೊಡನೆ ಚರ್ಚಿಸುತ್ತ ಪಾಕಿಸ್ತಾನದ ವಿರುದ್ಧ ಸುಮಾರು ೧೦-೧೫ ಗಂಭೀರ ಆರೋಪಗಳನ್ನು ಮಾಡಿ ಭಾರತದ ಸ್ವಯಂರಕ್ಷಣೆಗಾಗಿ ಕಾಶ್ಮೀರ ಮೇಲಿನ ದಾಳಿಗಾರರ ಮೂಲಸ್ಥಾನದ ಮೇಲೂ, ಪಾಕಿಸ್ತಾನದಲ್ಲಿರುವ ಅವರ ಡಾರಿಗಳ ಮೇಲೂ ಸೈನಿಕ ಕ್ರಮ ತೆಗೆದುಕೊಳ್ಳಲಾಗುತ್ತದೆಂತಲೂ ಹೇಳಿದರು

ಪಾಕಿಸ್ತಾನದ ಮುಖ್ಯಮಂತ್ರಿ ಲಿಯಾಖತ್ ಅಲೀಖಾನರು ಕೂಡ ಪತ್ರಿಕಾ ಪ್ರತಿನಿಧಿಗಳೊಡನೆ ಈ ಪ್ರಶ್ನೆಯ ಬಗ್ಗೆ ಚರ್ಚಿಸುತ್ತ, ನೆಹ್ರೂರವರ ಪಾಕಿಸ್ತಾನದ ಮೇಲಿನ ಆರೋಪಗಳನ್ನೆಲ್ಲ ಅಲ್ಲಗಳೆದು ಭಾರತವು ಪಾಕಿಸ್ತಾನದ ಮೇಲೆ ವಿಮಾನಗಳನ್ನು ಹಾರಿಸಿದಲ್ಲಿ ಪರಿಸ್ಥಿತಿಯು ವಿಕೋಪಕ್ಕೆ ಹೋಗುತ್ತದೆಂತಲೂ, ಪಾಕಿಸ್ತಾನವು ಇಂತಹ ಪರಿಸ್ಥಿತಿಯನ್ನು ಇಚ್ಛಿಸುವದಿಲ್ಲವೆಂತಲೂ, ಅದು ಶಾಂತಮೂರ್ತಿಯಂತೆಲೂ ಇಂತಹ ಪರಿಸ್ಥಿತಿಯು ಬಂದರೆ ಅದನ್ನು ಎದುರಿಸಲಿಕ್ಕೆ ಪಾಕಿಸ್ತಾನವು ಸಿದ್ಧವಾಗಿದೆಯೆಂದು ಹೇಳುತ್ತ ಭಾರತ ಸರಕಾರದ ಮೇಲೆ ೧೦-೧೫ ಪ್ರತ್ಯಾರೋಪಗಳನ್ನು ಮಾಡಿದರು.

ಬರ್ಮಾದ ಸ್ವಾತಂತ್ರ್ಯ

೪-೧-೪೮ ರಲ್ಲಿ ಬರ್ಮಾವು ಸ್ವಾತಂತ್ರ್ಯವನ್ನು ಗಳಿಸಿತು. ಆ ದಿನ ಅಲ್ಲಿ ಸ್ವಾತಂತ್ರ್ಯ ದಿನೋತ್ಸವವು ಅತಿ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ಪ್ರಪಂಚದ ಇತರ ದೇಶಗಳು ಸ್ವತಂತ್ರ ಬರ್ಮಾ ಸರಕಾರಕ್ಕೆ ಶುಭಾಶಯಗಳನ್ನು ಕಳಿಸಿಕೊಟ್ಟವು.

——

ಮುಧೋಳದಲ್ಲಿ ಪ್ರಜಾಪ್ರಭುತ್ವ

ಮುಧೋಳ ಸಂಸ್ಥಾನದಲ್ಲಿ ಪ್ರಜಾಪ್ರಭುತ್ವವನ್ನು ಸ್ಥಾಪಿಸಲು ಅಲ್ಲಿಯ ಸಂಸ್ಥಾನಾಧೀಶರು ವಚನ ಕೊಟ್ಟಿರುವರು.

NAVASANDESH
Reg No: M. 3736

ನವಸಂದೇಶ

ಸಂಪಾದಕರು- ಟಿ. ಎಚ್. ಎಂ. ಹೊಳೆಬಸವಶಾಸ್ತ್ರಿಗಳು
ಮುದ್ರಕರು- ಶ್ರೀ ಶಿವಾನಂದ ಪ್ರಿಂಟಿಂಗ ಪ್ರೆಸ್
ಪ್ರಕಾಶಕರು- ತೇಕುಬೀದಿ ಬಳ್ಳಾರಿ.

The Navasandesh Weekly Bellary

ಚಂದಾ ಮುಂಗಡ

ಬಿಡಿ ಸಂಚಿಗೆ ೧ ಆಣೆ ಸ್ಥಳದವರಿಗೆ ೩-೦-೦ ಪರಸ್ಥಳಕ್ಕೆ ೩-೧೩-೦

ಸಂಪುಟ ೧೪] ಬಳ್ಳಾರಿ ಬುಧವಾರ ತಾ|| ೧೪-೧-೧೯೪೮ 14-1-1948 [ಸಂಚಿಕೆ ೫೧

ಪೂರ್ವ ಕರ್ನಾಟಕದ ಗಡಿನಿರ್ಣಯ

ಲೇಖಕರು:- 'ಶಿವಸುತ'

ಪೆನುಕೊಂಡೆಯಲ್ಲಿ ಮಾಧ್ವ ಧರ್ಮ ಮಠಗಳು

ವಿಜಯನಗರ ಸಾಮ್ರಾಜ್ಯ ಯುಗದ ಉತ್ತರ ಭಾಗದಲ್ಲಿ ಅಂದರೆ ಸಾಳುವ, ತುಳು ವಂಶದವರ ಕಾಲದಲ್ಲಿ ಕರ್ನಾಟಕದಲ್ಲಿ ಭರಿ ಪ್ರಧಾನವಾದ ಮಾಧ್ವ ಧರ್ಮವು ವಿಜೃಂಭಿಸಿ ತನ್ನ ಪ್ರಕಾಶವನ್ನು ಯಾವತ್ತೂ ಭರತಖಂಡದ ಮೇಲೆ ಬೀರಿತು. ಈ ಕಾಲದಲ್ಲಿ ಕನ್ನಡನುಡಿಯು ಭಾಗವತ ಪಂಥದ ಧರ್ಮಭಾಷೆಯಾಯಿತು. ಕನ್ನಡ ಭಾಷೆಯಲ್ಲಿ ಲೆಕ್ಕಕ್ಕೆ ಮಿಕ್ಕಿದ ದೇವರ ನಾಮಗಳೂ, ಸುಳಾದಿಗಳೂ, ಉಗಾಭೋಗಗಳೂ, ದಾಸರಪದಗಳೂ ರಚಿಸಲ್ಪಟ್ಟವು. ಸಾಮ್ರಾಜ್ಯದಲ್ಲೆಲ್ಲ ಪ್ರಸಾರವಾಗಿ ಭಕ್ತಿಪಂಥದ ಹೆಚ್ಚಳವನ್ನು ಸಾರಿಹೇಳಿದವು. ಪೂಜ್ಯರಾದ ಶ್ರೀಪಾದರಾಯರು, ವ್ಯಾಸರಾಯರು, ವಾದಿರಾಜರು ಮತ್ತು ಶ್ರೀ ವ್ಯಾಸರಾಯರ ಅನುಯಾಯಿಗಳಾದ ಪುರಂದರದಾಸ, ಕನಕದಾಸರು ಕನ್ನಡ ಸಾಹಿತ್ಯಕ್ಕೆ ಸಲ್ಲಿಸಿರುವ ಕಾಣಿಕೆಗಳು ಅಪೂರ್ವವಾದವು. ಈ ಯುಗದಲ್ಲಿ ಪೆನುಕೊಂಡ ಭಾಗವತ ಪಂಥದ ಕೇಂದ್ರಸ್ಥಾನಗಳಲ್ಲಿ ಒಂದಾಗಿದ್ದಿತು. ಇಲ್ಲಿ ಶ್ರೀ ವ್ಯಾಸರಾಯ ಸ್ವಾಮಿಗಳ ಮಠವೂ ಮತ್ತು ಎರಡು ಬೃಂದಾವನಗಳೂ ಇರುತ್ತವೆ. ಇವುಗಳಿಗೆ ಇನಾಮತಿಗಳು ಸಹಾ ಇರುತ್ತವೆ ಮತ್ತು ಮಾಧ್ವ ಸಮಾಜದವರು ಸಹ ವಿಶೇಷವಾಗಿದ್ದು ಅವರೆಲ್ಲರೂ ಶುದ್ಧವಾದ ಕನ್ನಡವನ್ನು ಮಾತಾಡುವರು. ತಿರುಮಲರಾಜನ ಮಗನಾದ ರಾಮರಾಜನು ಸತ್ಯಬೋಧರಾಯ ಸ್ವಾಮಿಗಳ ಮಠವನ್ನು ನಿರ್ಮಾಣಗೊಳಿಸಿದಂತೆ ಅಲ್ಲಿ ಒಂದು ಕನ್ನಡ ಶಾಸನದಿಂದ ತಿಳಿದುಬರುತ್ತದೆ. ಪೆನುಕೊಂಡೆಯ ನಾಲ್ಕು ದಿಕ್ಕುಗಳಲ್ಲೂ ಪ್ರಾಣದೇವರ ಆಲಯಗಳಿರುವದು ಒಂದು ವೈಶಿಷ್ಟ್ಯ. ಇದಲ್ಲದೇ ಇಲ್ಲಿ ಮುಳಬಾಗಿಲು ಸ್ವಾಮಿಗಳ ಮಠವೊಂದೂ ತಿನಗಂಗೈ ಸ್ವಾಮಿಗಳ ಮಠವೊಂದೂ ಇರುತ್ತವೆ. ಅವುಗಳಿಗೆ ಇನಾಮಾದಾರು ಭೂಮಿಗಳು ಇರುತ್ತವೆ. ಈ ಗ್ರಾಮದಲ್ಲಿ ಲಕ್ಷ್ಮೀ ನೃಸಿಂಹ ಸ್ವಾಮಿ, ರಾಮಸ್ವಾಮಿ, ಗೋಪಾಲಸ್ವಾಮಿ, ಕಾಶೀವಿಶ್ವೇಶ್ವರ, ಐಮುಕ್ತೇಶ್ವರ, ನೀಲಕಂಠೇಶ್ವರ, ವಿಘ್ನೇಶ್ವರ'ಮುಂತಾಗಿ ಹಲವು ಪುರಾತನ ದೇವಾಲಯಗಳಿರುವವು. ಕೆಲ ದೇವಾಲಯಗಳು ಮಸೀದಿಗಳಾಗಿ ಮಾರ್ಪಟ್ಟಿವೆ. ಬಹು ದೊಡ್ಡದಾದ ಶಿವಾಲಯವೊಂದು ಈಗ ಮುಸಲ್ಮಾನರ 'ದರ್ಗಾ' ಆಗಿ ರೂಪಾಂತರ ಹೊಂದಿದೆ. ಈ ಮಂದಿರಗಳಲ್ಲಿ ಕಂಡುಬರುವ ಶಿಲ್ಪಕಲಾ ನೈಪುಣ್ಯವು ಮನಮೋಹಕವಾಗಿದೆ.

ಕ್ರಿ. ಶ. ೧೮೨೨ ರ ತಾಳವಾಲೆ ಗ್ರಂಥದಿಂದ ಎತ್ತಿ ಬರೆಯಲ್ಪಟ್ಟ "ಫನಾಚಲ ಚರಿತ್ರೆ" ಯೆಂಬ ಹಸ್ತ ಪ್ರತಿಯೊಂದು ಈ ಲೇಖಕನಿಗೆ ದೊರೆತಿದ್ದು ಅದರಲ್ಲಿ ಈ ಪಟ್ಟಣದ ಬಗ್ಗೆ ಕೆಲವು ಚರಿತ್ರಾಂಶಗಳು ದೊರೆತಿರುತ್ತವೆ. ಈ ಪಟ್ಟಣದ ಶಂಕುಸ್ಥಾಪನೆಯನ್ನು ಸೈದವನು ಜನಮೇಜಯರಾಯನೆಂದೂ, ಇದು ಪ್ರಾಚೀನ ಕಾಲದಲ್ಲಿ ಚಂದ್ರಗುತ್ತಿ, ಕರಿಕಾಲ್ಚೋಳ ಮುಂತಾದವರ ಪರಿಪಾಲನೆಗೆ ಒಳಪಟ್ಟದ್ದು ಕಾಲಾಂತರದಲ್ಲಿ ಶಿಥಿಲಾವಸ್ಥೆಗೆ ಗುರಿಯಾಯಿತೆಂದೂ ಹುಕ್ಕಬುಕ್ಕರ ಕಾಲದಲ್ಲಿ ಕ್ರಿಯಾಶಕ್ತಿ ಒಡೆಯರೆಂಬುವರು ಇದನ್ನು ಜೀರ್ಣೋದ್ಧಾರ ಮಾಡಿ ಕೋಟೆ ಕೊತ್ತಳಗಳನ್ನು ಕಟ್ಟಿಸಿದನೆಂದೂ ಮುಂತಾಗಿ ಈ ಹಸ್ತಪ್ರತಿಯಲ್ಲಿ ಹೇಳಿದೆ. ಹುತ್ತು ಫನಾಚಲ ಕ್ಷೇತ್ರದ ಮತ್ತು ಇಲ್ಲಿಯ ಬೆಟ್ಟದ ಮೇಲಿರುವ ಶ್ರೀ ಲಕ್ಷ್ಮೀ ನರಸಿಂಹ ಸ್ವಾಮಿಯ ಮಹಿಮಾತಿಶಯಗಳು ವ್ಯಾಸಪ್ರೋಕ್ತ ಬ್ರಹ್ಮಾಂಡ ಪುರಾಣಾಂತರ್ಗತ ಬ್ರಹ್ಮನಾರದ ಸಂವಾದ ಪ್ರಕರಣದಲ್ಲಿ ವರ್ಣಿತವಾಗಿದೆಯೆಂತೆ.

ಸ್ಥಳ ಪುರಾಣಗಳ ಮಾತು ಏನೇ ಇರಲಿ. ಇಲ್ಲಿ ಒಂದು ಪುರಾತನವಾದ ಪಟ್ಟಣವೊಂದಿದ್ದಿತೆಂದು ಇಲ್ಲಿಯ ಅವಶೇಷಗಳೇ ಸಾರುತ್ತವೆ. ಈ ಗ್ರಾಮದ ದಕ್ಷಿಣ ಭಾಗದಲ್ಲಿ ಕಂಗೊಳಿಸುತ್ತಿರುವ ಉತ್ತುಂಗ ಶಿಖರಾಲಂಕೃತವಾದ ಪರ್ವತವು ೩ ಸಾವಿರ ಅಡಿಗಳಷ್ಟು ಎತ್ತರವಾಗಿದ್ದು ಇದರ ಮೇಲ್ಭಾಗದಲ್ಲಿ ಅಭೇದ್ಯವಾದ ದುರ್ಗವಿರುತ್ತದೆ ಈ ದುರ್ಗದ ಶಂಕುಸ್ಥಾಪನೆ ಮಾಡಿದವನು ಕ್ರಿಯಾಶಕ್ತಿ ಒಡೆಯರೆಂದು "ವೀರಕಂಜಿ ಸಂಗ್ರಹ" ಗಳಿಂದ ತಿಳಿದುಬರುತ್ತದೆ. ಇಲ್ಲಿಯ ಕ್ಷೋಟಿಕೊತ್ತಳಗಳು ಬುಕ್ಕರಾಯನ ಕಾಲದಲ್ಲಿ ಕಟ್ಟಲ್ಪಟ್ಟವು. ಅನಂತರದ ಒಡೆಯರೆಂಬ ಪ್ರಧಾನಿಯು ಕೋಟೆ ಗೋಡೆಗಳನ್ನೂ ದ್ವಾರಗಳನ್ನೂ ವಿಸ್ತಾರಗೊಳಿಸಿದನೆಂದು ಉತ್ತರ ಮಹಾದ್ವಾರದಲ್ಲಿ ಕೆತ್ತಲ್ಪಟ್ಟಿರುವ ಶಾಸನವೊಂದು ಹೇಳುತ್ತದೆ ಪೆನುಕೊಂಡ ಬೆಟ್ಟದ ಕಿಬ್ಬರಿಯಲ್ಲಿ ಭೋಗ ಸಮುದ್ರವೆಂಬ ಕೆರೆಯು ಇರುತ್ತದೆ. ಆ ಕೆರೆಯನ್ನು ಹೊಂದಿಕೊಂಡು ಗ್ರಾಮದ ಉದ್ದು ಅದರ ಸುತ್ತಲೂ ಉನ್ನತವಾದ ಕೋಟೆ ಗೋಡೆಗಳೂ ದೊಡ್ಡ ಮಹಾದ್ವಾರ, ಉತ್ತರ ಮಹಾದ್ವಾರ ಮತ್ತು ಗೋರಂಟ್ಲ ಮಹಾದ್ವಾರಗಳೆಂಬ ಬಾಗಿಲುಗಳಿರುತ್ತವೆ. ಈ ದ್ವಾರಗಳ ಬಳಿ ಗೋಡೆಯ ಮೇಲೆ ಲಿಪಿಯ ಶಿಲುಶಾಸನಗಳು ಕೆತ್ತಲ್ಪಟ್ಟಿವೆ. ಪೂರ್ವದಲ್ಲಿ ಈ ಪಟ್ಟಣವು ಬಹು ವಿಸ್ತಾರವಾಗಿ ವ್ಯಾಪಿಸಿದ್ದಿರಬೇಕು. ಗ್ರಾಮದ ಸುತ್ತುಮುತ್ತು ಶಿಥಿಲ ಮಂದಿರಗಳ ಶಿಲೋವರಗಳೂ ಶಾಸನ ಕಲ್ಲುಗಳೂ ವೀರಗಲ್ಲುಗೆಳೂ ಮಾಸತಿ ಕಲ್ಲುಗಳೂ ಅಲ್ಲಲ್ಲಿ ಕಂಡು ಬರುವವು. ಪಾಮಿಡಿಯ ಗಂಗಾಸಾನಿ ಎಂಬ ಸತಿಯು (ಪೈಡಿ ಶೆಟ್ಟಿಯ ಮಗಳು) ಪೆನುಗೊಂಡೆಯಲ್ಲಿ ಅಗ್ನಿಪ್ರವೇಶ ಮಾಡಿದ ಸಂಗತಿಯೂ ಅವಳ ಸ್ಮಾರಕಾರ್ಥವಾಗಿ ವನವೋಲ್ಲಲ್ಲಿ ಒಂದು ವೃಂದಾವನವು ನಿರ್ಮಿಸಲ್ಪಟ್ಟ ವಿಷಯವೂ ಒಂದು ಕನ್ನಡ ಶಾಸನದಿಂದ ತಿಳಿದುಬರುತ್ತದೆ. ಇಲ್ಲಿಯ ಸಬ್ಬಕ್ಕಲೆಶ್ವರ ಕಚೇರಿಯ ಪ್ರಾಂಗಣದಲ್ಲಿ ಒಂದು ಅತ್ಯುನ್ನತವಾದ ಶಿಲಾಸ್ತಂಭವು ನೋಡತಕ್ಕಂಥಾದ್ದಾಗಿದೆ. ಅದರ ಮೇಲೆ ಶಾ. ಶ. ೧೫೮೯ ಸಂವತ್ಸರದ ಕನ್ನಡ ಶಾಸನವೊಂದು ಆ ಸ್ತಂಭವನ್ನು ನಿರ್ಮಿಸಿದವನ ಬಗ್ಗೆ ಕೆತ್ತಲ್ಪಟ್ಟಿದೆ. ಮತ್ತು ಅಲ್ಲಲ್ಲಿ ಹಲಕೆಲವು ಕನ್ನಡ ಶಾಸನಗಳು ನೆಲದಲ್ಲಿ ಹೂಳಿಕೊಂಡಿದ್ದು ಅವುಗಳು ಬೆಳಕಿಗೆ ಬರಬೇಕಾಗಿದೆ.

ಸಾಮ್ರಾಜ್ಯದ ರಾಜಧಾನಿ

ಕ್ರಿ. ಶ. ೧೫೬೫ ರಲ್ಲಿ ತಾಳೀಕೋಟೆ ಯುದ್ಧದ ಪರಿಣಾಮವಾಗಿ ವಿಜಯನಗರವು ವಿಧ್ವಂಸವಾಗಲೂ ಅ[illegible]ಯನ ತಮ್ಮನಾದ ತಿರುಮ[illegible]ವನು ವಿಜಯನಗರದಲ್ಲಿದ್ದ ಕರ್ನಾ[illegible]ರತ್ನ ಸಿಂಹಾಸನವನ್ನು ಪೆನುಗೊಂಡೆಗೆ [illegible]ಗಿಸಿ ಆ ದುರ್ಗವನ್ನು ಸಾಮ್ರಾಜ್ಯದ ರಾಜಧಾನಿಯನ್ನಾಗಿ ಮಾಡಿಕೊಂಡನು. ಇವನ ಪಟ್ಟಾಭಿಷೇಕವು ಕ್ರಿ. ಶ. ೧೫೬೫ ರಲ್ಲಿ ಪೆನುಗೊಂಡೆಯಲ್ಲಿ ಜರಗಿತು. ಈತನ ಕಾಲದಲ್ಲಿ ಸಾಮ್ರಾಜ್ಯವು ಆಂಧ್ರಮಂಡಲ, ಕರ್ನಾಟಕ ಮಂಡಲ, ತಮಿಳು ಮಂಡಲಗಳೆಂದು ಮೂರು ಭಾಗಗಳಾಗಿ ವಿಭಜಿಸಲ್ಪಟ್ಟವು. ಸಾಮ್ರಾಜ್ಯದ ಉತ್ತರಭಾಗವು ಆಂಧ್ರಮಂಡಲವೆನಿಸಿತು. ಉದಯಗಿರಿಯು ಈ ಮಂಡಲದ ರಾಜಧಾನಿ ಇದು ತಿರುಮಲರಾಯನ ಹಿರಿಯ ಮಗನಾದ ಶ್ರೀರಂಗರಾಯನ ಆಳಿಕೆಯಲ್ಲಿದ್ದಿತು. ತಮಿಳು ಮಂಡಲದಲ್ಲಿ ತುಂಡೀಕ, ಚೋಳ, ಪಾಂಡ್ಯ ರಾಜ್ಯಗಳು ಸೇರಿದ್ದವು. ಇದನ್ನು ತಿರುಮಲರಾಯನ ನಾಲ್ಕನೆಯ ಮಗನು ಚಂದ್ರಗಿರಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳುತ್ತಿದ್ದನು. ಇನ್ನುಳಿದ ಸಾಮ್ರಾಜ್ಯದ ಭಾಗವು ಕರ್ನಾಟಕ ಮಂಡಲವಾಗಿದ್ದಿತು. ತಿರುಮಲನ ಮೂರನೇ ಮಗನಾದ ರಾಮರಾಜನ ಪ್ರಭುತ್ವಕ್ಕೆ ಒಳಗಾಗಿದ್ದಿತು. ಇವನೇ ಪೆನುಕೊಂಡೆಯಲ್ಲಿ ಸತ್ಯಬೋಧರಾಯ ಸ್ವಾಮಿಯ ಮಠವನ್ನು ಕಟ್ಟಿಸಿದವನು.

ತಿರುಮಲದೇವನ ಅನಂತರ ಪಟ್ಟಕ್ಕೆ ಬಂದ ಶ್ರೀರಂಗದೇವರಾಯನು ಕ್ರಿ. ಶ. ೧೫೭೯ ರಿಂದ ೧೫೮೬ ರ ವರೆವಿಗೂ ರಾಜ್ಯವಾಳಿದನು. ಇವನ ಕಾಲದಲ್ಲೇ ರಾಜಧಾನಿಯು ಪೆನುಕೊಂಡದಿಂದ ಚಂದ್ರಗಿರಿಗೆ ವರ್ಗಾಯಿಸಲ್ಪಟ್ಟಿತೆಂದು ಅನಂತಪುರ ಜಿಲ್ಲಾ ಗೆಜೆಟಿಯರದಲ್ಲಿ ಹೇಳಿದೆ. ಆದರೆ ಕರ್ನಾಟಕ ಶಾಸನ ಸಂಗ್ರಹದ ೧೨ ನೇ ಸಂಚಿಕೆಯಲ್ಲಿರುವ ಶಾಸನಗಳಿಂದ ಇವನು ತಾನು ಗತಿಸುವವರೆವಿಗೂ (ಕ್ರಿ. ಶ. ೧೫೮೬) ಪೆನುಕೊಂಡದಲ್ಲೇ ರಾಜ್ಯಪರಿಪಾಲನೆ ಮಾಡಿದನೆಂದು ಗೊತ್ತಾಗುತ್ತದೆ. ಕ್ರಿ. ಶ ೧೫೮೬ ರಲ್ಲಿ ವಿಜಾಪುರದ ನವಾಬನಾದ ಆಲೀ ಆದಿಶಾಹನು ಶ್ರೀರಂಗರಾಯನನ್ನು ಯುದ್ಧದಲ್ಲಿ ಸೋಲಿಸಿ ಪೆನುಕೊಂಡೆಯ ಉತ್ತರಭಾಗದ ಸಾಮ್ರಾಜ್ಯವನ್ನೆಲ್ಲ ವಶಪಡಿಸಿಕೊಂಡನು. ಈ ಕಾಲದಲ್ಲೇ ಅನಂತಪುರ ರಾಜ್ಯವನ್ನು ಆಳುತ್ತಿದ್ದ ಹಂಡೆ ಮಲಕಪ್ಪನಾಯಕನು ವಿಜಾಪುರ ನವಾಬನಿಗೆ ಅಂಕಿತನಾಗಿ ಅವನಿಂದ "ಪಾದುಷಾವರ್ಜ" ಎಂಬ ಪದವಿಯನ್ನು ಪಡೆದುಕೊಂಡು ಬಾಳ್ಕೆಪಟ್ಟನು. ಅನಂತಪುರಗ್ರಾಮಾದಿ ಮುಂತಾದ ಗ್ರಾಮಗಳನ್ನು ಮಳಿ ಸಂಪಾದಿಸಿಕೊಂಡನು. ಕ್ರಿ. ಶ. ೧೫೮೯ ರ ಪ್ರಾಂತದಲ್ಲಿ ಸಾಮ್ರಾಜ್ಯದ ಆಂಧ್ರ ಮಂಡಲವೆಲ್ಲ ಗೋಲ್ಕೊಂಡ ನವಾಬನ ಸ್ವಾಧೀನವಾಯಿತು. ಉಳಿದವು ಕರ್ನಾಟಕ ಮತ್ತು ತಮಿಳು ಮಂಡಲಗಳು ಮಾತ್ರ. ಶ್ರೀರಂಗದೇವರಾಯನು ಕ್ರಿ. ಶ. ೧೬೨೦-ರಲ್ಲಿ ಪೆನುಕೊಂಡದಲ್ಲಿ ಕೇಶವಸ್ವಾಮಿ ಆಲಯವನ್ನು ಕಟ್ಟಿಸಿದನು.

(ಸಶೇಷ)

.....

ಅಕ್ಕಲಕೋಟೆಯಲ್ಲಿ ಸತ್ಯಾಗ್ರಹ

ಅಕ್ಕಲಕೋಟೆ ಸಂಸ್ಥಾನದಲ್ಲಿ ಜವಾಬ್ದಾರೀ ಪ್ರಜಾಪ್ರಭುತ್ವವನ್ನು ಸ್ಥಾಪಿಸಲಿಕ್ಕೆ ಅಲ್ಲಿಯ ಪ್ರಜಾ ಆಂದೋಳನ ಹೂಡಲು ಸತ್ಯಾಗ್ರಹವನ್ನು ಪ್ರಾರಂಭಿಸಿರುವರು.

.....

ನವಸಂದೇಶ

ಬುಧವಾರ ತಾ|| ೧೪-೧-೧೯೪೪

ಬಳ್ಳಾರಿ ಜಿಲ್ಲೆಯಲ್ಲಿ
ಶ್ರೀ ಕಂಬಳಿಯವರ ಪ್ರವಾಸ

ಮುಂಬಯಿ ಪ್ರಾಂತದ ಮಾಜಿ ಮಂತ್ರಿಗಳಾಗಿದ್ದ ಶ್ರೀ ಸಿದ್ಧಪ್ಪಣ್ಣ ಕಂಬಳಿಯವರು ಕರ್ನಾಟಕ ಪ್ರಾಂತರಚನೆಯ ಪ್ರಚಾರಕ್ಕಾಗಿ ಶ್ರೀ ಕೊಳ್ಳಿಯವರೊಡನೆ ತಾರೀಖು ೧೧-೧-೪೪ ರಂದು ಸಾಯಂಕಾಲ ಬಳ್ಳಾರಿಗೆ ಆಗಮಿಸಿದರು. ರೇಲ್ವೆ ಏಲ್ದಾಣದಲ್ಲಿ ಬಳ್ಳಾರಿ ಪ್ರಮುಖರೆಲ್ಲರೂ ಅವರನ್ನು ಬಹು ಸಂಭ್ರಮದಿಂದ ಸ್ವಾಗತಿಸಿದರು. ಸಾಯಂಕಾಲ ೪ ಘಂಟೆಯ ಧ್ವಜವಂದನಾ ಮೈದಾನದಲ್ಲಿ ಕೂಡಿದ್ದ ಮಹಾಚಂಡ ಸಭೆಯಲ್ಲಿ ಕರ್ನಾಟಕ ಏಕೀಕರಣ ವಿಷಯವಾಗಿ ಭಾಷಣ ಮಾಡುವದಕ್ಕೆ ಮುಂಚೆ ಶ್ರೀ ಟಿ. ಎಚ್. ಎಂ. ಚಂದ್ರಶೇಖರಶಾಸ್ತ್ರಿಗಳವರು ಸಭಿಕರಿಗೆ ಅವರ ಪರಿಚಯ ಮಾಡಿಕೊಡುತ್ತ ಕರ್ನಾಟಕ ಅಪ್ರತಿಮ ಮುಖಂಡರು ಈ ಕರ್ನಾಟಕ ಚಳವಳಿಯ ಮುಖಂಡತ್ವವನ್ನು ವಹಿಸಿ ಈಗ ಮುಂದಕ್ಕೆ ಬಂದಿರುವದರಿಂದ ಇನ್ನು ಕನ್ನಡಿಗರು ನಿರಾಸೆ ಪಡಲಿಕ್ಕೆ ಕಾರಣವಿಲ್ಲವೆಂತಲೂ, ನೂರು ಮಂದಿ ನೆಹ್ರೂ ರವರು ಇಷ್ಟೇ ಮುಂದಿ ಸರ್ದಾರ ಪಟೇಲರು ಕರ್ನಾಟಕ ಪ್ರಾಂತ ನಿರ್ಮಾಣವನ್ನು ವಿರೋಧಿಸಿದರೂ, ಅಂತಹ ವಿರೋಧವನ್ನು ಧೂತ್ತಿಂದು ಊದುವ ಶಕ್ತಿಯುಳ್ಳ ಈ ಕಂಬಳಿಯವರಿಂತಲೂ, ಇವರ ಕರ್ತೃತ್ವಶಕ್ತಿ ನಿಸ್ಪೀಮ ದೇಶಭಕ್ತಿ, ವಿಚಾರ ಮತ್ತು ವಾಸ್ತವ್ಯವಾದತ್ವ ಮುಂತಾದವುಗಳು ಅದ್ವಿತೀಯವೆಂತಲೂ, ಇವರೇ ಬೆಳಗಾಂವಿಯ್ಲಿ ಕೂಡಿದ ಮೊದಲನೇ ಕ. ವಿ ಪರಿಷತಿಗೆ ಗಾಂಧಿಯವರು ಬೆಳಗಾಂವಿಯ ಕಾಂಗ್ರೆಸ್ ಅಧಿವೇಶನಕ್ಕೆ ಅಧ್ಯಕ್ಷರಾಗಿದ್ದಾಗೆ ಅಧ್ಯಕ್ಷರಾಗಿದ್ದರೆಂತಲೂ ವಗೈರಾ ವಿಷಯಗಳ ಮೇಲೆ ಭಾಷಣ ಮಾಡಿದರು. ಸಭೆಯು ಕ್ರಿಕ್ಕಿರಿದು ನೆರೆದಿದ್ದರಿಂದ ಧ್ವನಿವಾಹಕ ಯಂತ್ರದ ಏರ್ಪಾಟು ಸಾಡಲಿಗಿತ್ತು. ಶ್ರೀ ಕಂಬಳಿಯವರು ಸುಮಾರು ೧ ತಾಸಿನವರೆಗೂ ಅಸ್ಖಲಿತ ವಾಣಿಯಿಂದ ಭಾಷಣ ಮಾಡಿ ಆಂಧ್ರ ಪ್ರಾಂತದೊಡನೆ ಕರ್ನಾಟಕ ಪ್ರಾಂತ ನಿರ್ಮಾಣವಾಗದೇ ಹೋದರೆ ಕನ್ನಡಿಗರಿಲ್ಲರೂ ಅಸಹಕಾರ ಮತ್ತು ಸತ್ಯಾಗ್ರಹ ಚಳವಳಿಯನ್ನು ಹೂಡಲು ಸಿದ್ಧರಾಗಿರಬೇಕೆಂದು ಹೇಳಿದರು. ನಂತರ ಶ್ರೀ ಕೊಳ್ಳಿಯವರು, ಕೋ| ಚನ್ನಬಸಪ್ಪ, ಮರುಳಸಿದ್ಧಯ್ಯ, ಷಡಕ್ಷರಶಾಸ್ತ್ರಿ ಮುಂತಾದವರು ಭಾಷಣ ಮಾಡಿದನಂತರ ರಾತ್ರಿ ೯ ಗಂಟೆಗೆ ಸಭೆಯು ವಿರಾಮಗೊಂಡಿತು. ಬಳ್ಳಾರಿಯವರು ತಮಗೊಬ್ಬ ಒಳ್ಳೇ ಸಿಷ್ಟಾವಂತ ಕರ್ತೃತ್ವಶಾಲಿಯಾದಂಥ ಮುಖಂಡರು ದೊರೆತಿಲ್ಲವೆಂದು ಹರ್ಷೋದ್ಗಾರಗೈದರು. ಮರುದಿನ ಶ್ರೀ ಕಂಬಳಿಯವರು ಮತ್ತು ಕೊಳ್ಳಿ ವಕೀಲರು ರಾಯದುರ್ಗ, ಆದವಾನಿ, ಆಲೂರುಗಳ ಕಡೆಗೆ ಪ್ರಯಾಣ ಬೆಳೆಸಿದರು.

.....

ಪತ್ತಿಕೊಂಡ ತಾಲೂಕು ಪೂರ್ವ ಕರ್ನಾಟಕದ ಭಾಗವು

ಇದೇನು ಹೊಸ ಸೊಲ್ಲಲ್ಲ. ಆ ಪತ್ರಿಕರ್ನೂಲಿನ 'ಜ್ವಾಲಾ' ಪತ್ರಿಕೆಯು ಮೊತ್ರ ಇದು ಬಳ್ಳಾರಿ ಜಿಲ್ಲೆಯವರು ಹೊಸದಾಗಿ ಎಬ್ಬಿಸಿರುವ 'ಗುಲ್ಲೆ'ಂದು ಬಿಡರಿದೆ. ರೊಚ್ಚಿಗೆದ್ದಿದೆ. ಪತ್ತಿಕೊಂಡ ತಾಲೂಕನ್ನು ಕನ್ನಡಿಗರ ದಾಳಿಯಿಂದ ರಕ್ಷಿಸುವ ಬಾಧ್ಯತೆಯನ್ನು ಪತ್ತಿಕೊಂಡ ಗ್ರಾಮದಲ್ಲಿ ಪ್ರಕಟವಾಗುತ್ತಿರುವ 'ಇಂದ್ರಾವತಿ' ಎಂಬ ಪತ್ರಿಕೆಗೆ ಒಪ್ಪಿಸಿದೆ. ಅದರೆ ಆದೇ ಕೋ 'ಇಂದ್ರಾವತಿ' ಪತ್ರಿಕೆಯು ತನ್ನ ೯-೧-೪೪ ರ ಸಂಚಿಕೆಯಲ್ಲಿ 'ಜ್ವಾಲಾ' ಪತ್ರಿಕೆಯು ಎಬ್ಬಿಸಿದ ಜ್ವಾಲೆಯ ಮೇಲೆ ತಣ್ಣೀರನ್ನೆರಚಿದೆ ತನ್ನ ಬಾಧ್ಯತೆಯನ್ನು ಒಂದು ತಾಲೂಕಿಗೆ ಮಾತ್ರ ಸಂಬಂಧಿಸಿದಲ್ಲವಂತೆ! ಎಲ್ಲಿ ಅವಸರವೆಂದು ತೋರುವದೋ ಅಲ್ಲಿ ಬಾಧ್ಯತೆ ವಹಿಸುವದಂತೆ! ಹೊಳೆಯು ಹರಿಯುವಂತೇ ಹರಿಯುವಂತೆ! ಇತರ ಪತ್ರಿಕೆಗಳಿಗೆ ಬಾಧ್ಯತೆ ಇಲ್ಲವೇನೋ ಎಂಬ ಸಂಶಯವನ್ನು ಸಹಾ ಸ್ಫೂರಿಸಿದೆ. ಇಷ್ಟೇ ಅಲ್ಲ. "ಪತ್ತಿಕೊಂಡ ತಾಲೂಕಾ ಪೂರ್ವಕರ್ನಾಟಕಮನಿ ಏಮೂಲನೋ ಒಕರು ಕೊಕ್ಕರಿಂಚಿನ ಅನಿ ಲೆಕ್ಕ ಬೆಟ್ಟುಟ ಆವಿವೇಕ"ವೆಂದು ಉದ್ಗಾರ ತೆಗೆದಿದೆ. ಅಹುದು! ಪತ್ತಿಕೊಂಡದಲ್ಲಿರುವ ತನ್ನ ಪತ್ರಿಕಾಲಯವೇ ವಿಶಾಲಪ್ರಪಂಚವೆಂದು ತಿಳಿದುಕೊಂಡಿರುವ ಈ ಸಂಪಾದಕ ಮಹಾಶಯರಿಗೆ ಉಳಿದುದೆಲ್ಲ "ಮೂಲೆ" ಯೇ ಸರಿ. ಇವರು ಉಪಯೋಗಿಸಿರುವ "ಕೊಕ್ಕರಿಂಚಿನ" ಎಂಬ ಶಬ್ದವು ಇವರ ಆಂಧ್ರ ಭಾಷೆಯ ಅಗಾಧ ಪಾಂಡಿತ್ಯವನ್ನು ಸೂಚಿಸುತ್ತದೆ. ಸಂಪಾದಕರು ಲೇಖನಿಯು ಅಲ್ಲಿಗೆ ನಿಂತಿದ್ದರೆ ಈ ಲೇಖನವನ್ನು ಬರೆಯುವ ಪ್ರಸಂಗವೇ ನಮಗೆ ಬರುತ್ತಿದ್ದಿಲ್ಲ ಇರಲಿ ಮುಂದೆ ಸಾಗುತ್ತ "ರೋಷಣ ಭೀ ಮುಲುವಲಸಿನ ವಿಚ್ಚನು ಎಂದು ನವತ್ತೊಂದು ಪ್ರಗಲ್ಭ ವಾಕ್ಯವನ್ನು ಪ್ರಸವಿಸಿದೆ. ಆ "ರೋಷಣ ಭೀಷಣಗಳು" ಸಂಪಾದಕರ ತಲೆಯಲ್ಲಿ ಎಂದು ಮೂಡಿದ್ದವೋ ಎದುರು ನೋಡಬೇಕಾಗಿದೆ. "ಯಾವದೋ ಒಂದು ಮೂಲೆಯಲ್ಲಿ ಯಾರೋ ಒಬ್ಬರು ಪತ್ತಿಕೊಂಡ ತಾಲೂಕು ಪೂರ್ವ ಕರ್ನಾಟಕವೆಂದು 'ಕೊಕ್ಕರಿಸಿ'ದರೆ ಅದನ್ನು ಲೆಕ್ಕಸ್ಥೆ ತರುವದು ಅವಿವೇಕವೆಂ"ದು ಘೋಷಿಸಿದ ಸಂಪಾದಕರೇ ಆದೇ ತಮ್ಮ ಸಂಚಿಕೆಯಲ್ಲಿ ಆಂಧ್ರ 'ಅವಿವೇಕ'ವೊಂದನ್ನು ಪ್ರಕಟಿಸಿರುವರು. 'ಆಂಧ್ರಾಭಿಮಾನಿ' ಎಂಬೊಬ್ಬರ "ಪತ್ತಿಕೊಂಡ ತಾಲೂಕು ಕರ್ನಾಟಕುಲ ಲೋ ಜೇಶದು" ಎಂಬ ಲೇಖನವನ್ನು ಪ್ರಕಟಿಸಿರುವರು. ಈ 'ಆಂಧ್ರಾಭಿಮಾನಿ'ಯು ಹೇಳುವದೇನೆಂದರೆ;

ಅನಾದಿಕಾಲದಿಂದಲೂ ಪತ್ತಿಕೊಂಡ ತಾಲೂಕಿನಲ್ಲಿ ತೆಲುಗು ಭಾಷೆಯನ್ನೇ ಮಾತಾಡುವರು. ಕನ್ನಡವನ್ನು ಮಾತಾಡುವವರು ನೂರಕ್ಕೆ ೩ ಕ್ಕಿಂತ ಹೆಚ್ಚಿಲ್ಲ. ಅವರು 'ಸಹಾ ಬಳ್ಳಾರಿ ಜಿಲ್ಲೆಯ ಕನ್ನಡ ಪ್ರಾಂತಗಳಿಂದ ಬಂದವರೋ ಅಥವ ಅವರೊಡನೆ ಬಾಂಧವ್ಯವುಳ್ಳವರೋ ಇರಬಹುದು. ಸಾಮಾನ್ಯ ಪ್ರಜಾನೀ ವೆಲ್ಲವೂ ತೆಲುಗನ್ನೇ ಮಾತಾಡುವರು. ಕರ್ನಾಟಕರು ಪತ್ತಿಕೊಂಡವನ್ನು ತಮ್ಮ ದೇಶದಲ್ಲಿ ಸೇರಿಸಬೇಕು ಎಂ ವದರಲ್ಲಿ ಅರ್ಥವಿಲ್ಲ' ಯಾವದೊಂದು ವಿಷಯವನ್ನು ಚರ್ಚಿಸುವಾಗ ಆಯಾ ಪ್ರಾಂತೀಯ ಭಾಷೆಗಳನ್ನೂ ಆ ದೇಶದ ಆಚಾರಗಳನ್ನೂ ನಡತೆಗಳನ್ನೂ ಚನ್ನಾಗಿ ತಿಳಿದುಕೊಂಡೇ ಮಾತಾಡಬೇಕು. "ಪತ್ತಿಕೊಂಡ" ತೆಲುಗು ಶಬ್ದವೆಂದು ಕರ್ನಾಟಕರು ಗ್ರಹಿಸಿರತಕ್ಕದ್ದು. 'ಪುಕ್ಕಿಟೆ' ಪುರಾಣಗಳನ್ನು ಹೇಳಿದರೆ ಪ್ರಜ್ಞಾವಂತರು ನಂಬದೇ "ನಾವು ಆಂಧ್ರ ನಾವು ತೆಲುಗರು" ಎಂದು ಸಮರ್ಥಿಸಿ ಕರ್ನಾಟಕವನ್ನೆ ವಾಗ್ಬಂಧನ ಮಾಡಬೇಕು. ಸುಮ್ಮನಿಷ್ಟರೆ ಪ್ರಯೋಜನವಿಲ್ಲ ಪ್ರತಿಗ್ರಾಮಗಳಲ್ಲೂ ಸಭೆಗಳನ್ನು ಜರುಗಿಸಿ ನಿರಸನ ಭಾವವನ್ನು ಪ್ರಕಟಿಸಿರಿ" ಇತ್ಯಾದಿ-

ಈ ಲೇಖಕನು ತೆಲುಗರೇ ಅಲ್ಲವೆಂಬುದು ಅವರು ಇಟ್ಟುಕೊಂಡಿರುವ 'ಆಂಧ್ರಾಭಿಮಾನಿ' ಎಂಬ ಹೆಸರೇ ಸಾರುತ್ತದೆ. ಅವರ ಲೇಖನದ ಶೈಲಿಯು ಸಹಾ ಅವರ ಆಂಧ್ರತ್ವವನ್ನು ಕಡೆಗಣಿಸುತ್ತದೆ. 'ಪತ್ತಿಕೊಂಡ' ಎಂಬುದು ತೆಲುಗು ಮಾತಂತೆ' ಈ ಸಂಯುಕ್ತ ಶಬ್ದದಲ್ಲಿರುವ 'ಪತ್ತಿ' ನು ತ್ತು 'ಕೊಂಡ' ಇವೆರಡೂ ಶುದ್ಧ ಕನ್ನಡ ಶಬ್ದಗಳು. (ಕಿಟೆಲ್ ಅವರ 'ಕನ್ನಡ ಶಬ್ದಕೋಶ" ಪುಟಗಳು ೯೩೪ ಮತ್ತು ೪೮೫ ನೋಡಿರಿ) 'ಪರ್ತಿ, ಹಂಜಿ, ಹತ್ತಿ' ಇವುಗಳು 'ಪತ್ತಿ' ಶಬ್ದದ ರೂಪಾಂತರಗಳು ಬರಿ ಪತ್ತಿಕೊಂಡ ತಾಲೂಕೇ ಏಕೆ? ಶ್ರೀಶೈಲ ಪ್ರಾಂತವೆಲ್ಲ ಕನ್ನಡಿಗರ ಮನೆನಾಡು ಇಷ್ಟು ಬರೀ 'ಪುಕ್ಕಿಟೆ' ಪುರಾಣದ ಮಾತಲ್ಲ. ಶಾಸನಗಳ ಆಧಾರವುಂಟು. ತೆಲುಗು ಕನ್ನಡ ಚರಿತ್ರೆಗಳ ಆಧಾರವುಂಟು. ಈ ಪ್ರಾಂತದವರ ನಡೆ, ನುಡಿ, ಸಂಪ್ರದಾಯ, ಸಂಸ್ಕೃತಿ, ವೇಷ, ಆಚಾರ, ವ್ಯವಹಾರ ಮುಂತಾದವುಗಳು ಇದು ಕನ್ನಡ ನಾಡೆಂದೇ ಸ್ಪಷ್ಟಾಕ್ಷರಗಳಿಂದ ಸಾರುತ್ತವೆ. ತೆಲುಗು ಪಂಡಿತರು ಮಾಡಿರುವ "ತ್ರಿಲಿಂಗ" ಶಬ್ದದ ನಿರ್ವಚನದಿಂದ ತೆಲುಗು ದೇಶದ ಪತ್ತಿಮ ಸರಿಹದ್ದು ಶ್ರೀಶೈಲ ಪರ್ವತಕ್ಕೇನೇ ನಿಂತುಬಿಡುತ್ತವೆ. ಶಾಸನಗಳ ರೀತ್ಯಾ ಶ್ರೀಶೈಲ ಕ್ಷೇತ್ರದ ಸುತ್ತಮುತ್ತಣ ನಾಡು 'ಕಣ್ಣಡವಿಷಯ, ಕನ್ನಾಡು ಮತ್ತು ಕರ್ನಾಟಕ ಸೀಮೆ" ಎಂದು ಕರೆಯಲ್ಪಡುತ್ತಿದ್ದಿತು. ಶ್ರೀಶೈಲ ಮಲ್ಲಿಕಾರ್ಜುನ ದೇವಾಲಯದ ಶಕೆ ೧೩೮೮ ರ ಒಂದು ಶಾಸನದಲ್ಲಿ "ಕರ್ನಾಟಕ ಲಕ್ಷ್ಮೀ (ಃ) ಸವಿಲಾಸ ಮಾನಯಷ್ಮಿನ್ ಮಹೀಪೇ ವ್ಯಹನೀಯು ಕೀರ್ತಾ" ಎಂಬ ವಾಕ್ಯವಿದೆ. ಕರ್ನಾಟಕರ ಜ್ಯಲಕ್ಷ್ಮಿಯು ಮಹನೀಯ ಕೀರ್ತಿಯನ್ನು ಕೊಂಡಾಡುತ್ತಿರುವದು. ಅದೇ ವಾಕ್ಯವು ಬಳ್ಳಾರಿ ತಾ|| ಸೋಮಲಾಪುರದಲ್ಲಿರುವ ಕ್ರಿ ಶ. ೧೩೮೮ ರ ಶಾಸನವೊಂದರಲ್ಲಿ ಕಂಡುಬರುತ್ತಿದ್ದು ಆಗಿನ ಕಾಲದಲ್ಲಿ ಕನ್ನಾಡಿನ ಭಾಗವಾದ ಶ್ರೀಶೈಲ ರಾಜ್ಯವು ಕರ್ನೂಲು ತಾಲೂಕು, ಪತ್ತಿಕೊಂಡ ತಾಲೂಕು, ಆದವಾನಿ, ಆಲೂರು, ರಾಯದುರ್ಗ ತಾಲೂಕುಗಳನ್ನು ಒಳಗೊಂಡು ಬಳ್ಳಾರಿಯವರೆವಿಗೂ ವ್ಯಾಪಿಸಿದ್ದಿತು. "ಇಂದ್ರಾವತಿ" ಯ ಸಂಪಾದಕರ 'ರೋಷ ಭೀಷಣಗಳ ಪ್ರದರ್ಶನೆಯನ್ನು ನಾವು ಒಳ್ಳೇ ಆಸಕ್ತಿಯಿಂದ ಎದುರು ನೋಡುತ್ತಿರುವೆವು. ಅವರಿಗೆ ನಮ್ಮ ವಿನಂತಿ ಇಷ್ಟೆ. ನಿಮ್ಮ ವಾದವನ್ನು ಸಮರ್ಥಿಸಲೂ ಅಂಕೆ ಅಂಶಗಳನ್ನು ಪ್ರಕಟಿಸಿರಿ. ಆ ತಾಲೂಕಿನಲ್ಲಿ ಯಾವ ಯಾವ ಗ್ರಾಮಗಳಲ್ಲಿ ಯಾವ ಯಾವ ಭಾಷೆಗಳ ಶಾಸನಗಳಿವೆ? ಯಾವ ಯಾವ ಕಾಲದಲ್ಲಿ ಯಾವ ಯಾವ ಅರಸರುಗಳು ಆಳಿದರು? ಹಳ್ಳಿಗಳ ಹೆಸರುಗಳು ಕನ್ನಡದಲ್ಲಿರಲೂ ಕಾರಣವೇನು? ಆ ಪ್ರಾಂತದ ಸಂಸ್ಕೃತಿಯ ವೈಶಿಷ್ಟ್ಯವೇನು? ಈ ಅಮೌಲ್ಯ ಅಂಶಗಳನ್ನು ಶೋಧಿಸಿ ಪ್ರಕಟಿಸಿದರೆ ನಿಮ್ಮ ಪತ್ರಿಕೆಯು ಜನತೆಗೆ ಒಂದು ಘನವಾದ ಸೇವೆಯನ್ನು ಸಲ್ಲಿಸಿದಂತಾಗುತ್ತದೆ. ಶುಷ್ಕ ಪಟಾತೋಪದಿಂದ ಪ್ರಯೋಜನವಿಲ್ಲ. 'ಜ್ವಾಲಾ' ಪತ್ರಿಕೆಯು ವರಿಗೂ ಇದೇ ವಿನಂತಿಯು.

—ಓರ್ವ ಕನ್ನಡಿಗ

ಪಾಕಿಸ್ಥಾನದ ವಿರುದ್ಧ ಪಠಾಣರ ಆಂದೋಳನ

ಪಾಕಿಸ್ಥಾನದ ವಿರುದ್ಧ ಪಠಾಣರು ಆಂದೋಳನ ಮಾಡಹತ್ತಿರುವರು. ಅಜ್ಞಾತ ವಾಸದಲ್ಲಿರುವ ನಾಲ್ವತ್ತು ಮಂದಿ ಅಫ್ಘಾನ ರಾಜಕುಮಾರರು ಪಠಾಣಿಸ್ಥಾನವನ್ನು ಸಾಧಿಸಲು ಇದೇ ತಕ್ಕ ಸಮಯವು. ಈ ಸಮಯವನ್ನು ಕಳಕೊಂಡರೆ ಪಾಕಿಸ್ಥಾನವು ಬಲಿತು ಪಠಾಣರನ್ನು ಬಗ್ಗು ಬಡಿಯುವದೆಂದು ಪಠಾಣರನ್ನು ಎಚ್ಚರಿಸಹತ್ತಿರುವರು. ಇಪ್ಪೀ ಫರ್ಕೇದನು ಬ್ರಿಟಿಶರಿಗೆ ಕೊಡುತ್ತಿದ್ದ ತೊಂದರೆಗಳನ್ನು ಪಾಕಿಸ್ಥಾನಕ್ಕೆ ಕೊಡಹತ್ತಿರುವನು. ಪಾಕಿಸ್ಥಾನದ ಸರಕಾರವು 'ಗಡಿನಾಡಿನ ಗಾಂಧಿ'ಯನ್ನು ಲೈಸೆನ್ಸು ಇಲ್ಲದೇ ರಿವಾಲ್ವರನ್ನು ಇಟ್ಟುಕೊಂಡಿದ್ದನೆಂಬುವ ಆರೋಪದ ಮೇಲೆ ಬಂಧಿಸಿರುವದು. ಇದರಿಂದ ಕೆಂಪಂಗಿ ಸ್ವಯಂಸೇವಕರೆಲ್ಲರೂ ಕೋಪಾವಿಷ್ಟರಾಗಿರುವರು. ಪಾಕಿಸ್ಥಾನದ ವಿರುದ್ಧ ಆಂದೋಳನ ಜರುಗಿಸಹತ್ತಿರುವರು. ಇದರಿಂದ ಪಾಕಿಸ್ಥಾನ ಸರಕಾರಕ್ಕೆ ಬಹಳ ತಲೆಶೂಲೆ ಎದ್ದಿದೆ.

'ಜೀವನಾಧಾರ'

ಎಂಬುವ ಆಯುರ್ವೇದ ಮಾಸಪತ್ರಿಕೆಯು ವಿಜಯಪುರದಿಂದ ೧೫-೧-೪೪ ರಿಂದ ಆಯುರ್ವೇದ ತೀರ್ಥ ಜಿ. ವಿ. ಪುರಾಣೀಕ ಇವರ ಸಂಪಾದಕತ್ವದ ಕೆಳಗೆ ಹೊರಡುವದು.

ಬಣ್ಣದ ಜೇನುತುಪ್ಪ

ಅಮೇರಿಕಾದಲ್ಲಿ ತರತರಹದ ಬಣ್ಣಗಳುಳ್ಳ ಜೇನುತುಪ್ಪವನ್ನು ಹುಲಗಳಿಂದ ಮಾಡಿಸಹತ್ತಿರುವರು. ಇದಕ್ಕಾಗಿ ಜೇನು ಹುಳಗಳು ಹೂವುಗಳಿಗಾಗಿ ತಮ್ಮ ಗೂಡುಗಳನ್ನು ಬಿಟ್ಟು ಹೋಗಬೇಕಾಗಿಲ್ಲ. ಕಾಜಿನ ಜೇನು ಗೂಡುಗಳ ಹತ್ತಿರ ಬಣ್ಣದ ಸಕ್ಕರೆ 'ಸಿರಪ್ಪ'ನ್ನು ಇಡುತ್ತಿರುವದರಿಂದ ಜೇನು ಹುಳಗಳು ಆ ಸಿರಪ್ಪನ್ನೇ ತಮ್ಮ ಗೂಡುಗಳಿಗೆ ತೆಗೆದುಕೊಂಡು ಹೋಗಿ ಅದನ್ನು ಜೇನಾಗಿ ಮಾರ್ಪಡಿಸುವವು.

ನವಸಂದೇಶ

ಬುಧವಾರ ತಾ|| ೧೪-೧-೧೯೪೮

ಬಳ್ಳಾರಿ ಜಿಲ್ಲೆಯಲ್ಲಿ
ಶ್ರೀ ಕಂಬಳಿಯವರ ಪ್ರವಾಸ

—

ಮುಂಬಯಿ ಪ್ರಾಂತದ ಮಾಜಿ ಮಂತ್ರಿಗಳಾಗಿದ್ದ ಶ್ರೀ ಸಿದ್ದಪ್ಪಣ್ಣ ಕಂಬಳಿಯವರು ಕರ್ನಾಟಕ ಪ್ರಾಂತರಚನೆಯ ಪ್ರಚಾರಕ್ಕಾಗಿ ಶ್ರೀ ಕೊಳ್ಳಿಯವರೊಡನೆ ತಾರೀಖು ೧೧-೧-೪೮ ಸಾಯಂಕಾಲ ಬಳ್ಳಾರಿಗೆ ಆಗಮಿಸಿದರು. ರೇಲ್ವೆ ನಿಲ್ದಾಣದಲ್ಲಿ ಬಳ್ಳಾರಿ ಪ್ರಮುಖರೆಲ್ಲರೂ ಅವರನ್ನು ಬಹು ಸಂಭ್ರಮದಿಂದ ಸ್ವಾಗತಿಸಿದರು. ಸಾಯಂಕಾಲ ೪ ಘಂಟೆಯ ಧ್ವಜವೈದಾನದಲ್ಲಿ ಕೂಡಿದ್ದ ಪ್ರಚಂಡ ಸಭೆಯಲ್ಲಿ ಕರ್ನಾಟಕ ಏಕೀಕರಣ ವಿಷಯವಾಗಿ ಭಾಷಣ ಮಾಡುವದಕ್ಕೆ ಮುಂಚೆ ಶ್ರೀ ಟಿ. ಎಚ್. ಎಂ. ಚಂದ್ರಶೇಖರಶಾಸ್ತ್ರಿಗಳವರು ಸಭಿಕರಿಗೆ ಅವರ ಪರಿಚಯ ಮಾಡಿಕೊಡುತ್ತ ಕರ್ನಾಟಕ ಅಪ್ರತಿಮ ಮುಖಂಡರು ಈ ಕರ್ನಾಟಕ ಜಳವಳಿಯ ಮುಖಂಡತ್ವವನ್ನು ವಹಿಸಿ ಈಗ ಮುಂದಕ್ಕೆ ಬಂದಿರುವದರಿಂದ ಇನ್ನು ಕನ್ನಡಿಗರು ನಿರಾಸೆ ಪಡಲಿಕ್ಕೆ ಕಾರಣವಿಲ್ಲವೆಂತಲೂ, ನೂರು ಮಂದಿ ನೆಹ್ರೂ ರವರು ಇಪ್ಪೇ ಮುಂದಿ ಸರ್ದಾರ ಪಟೇಲರು ಕರ್ನಾಟಕ ಪ್ರಾಂತ ನಿರ್ಮಾಣವನ್ನು ವಿರೋಧಿಸಿದರೂ, ಆಂತಹ ವಿರೋಧವನ್ನು ಧುತ್ತೆಂದು ಊದುವ ಶಕ್ತಿಯುಳ್ಳ ಈ ಕಂಬಳಿಯವರೆಂತಲೂ, ಇವರ ಕರ್ತೃತ್ವಶಕ್ತಿ ನಿಸ್ಸೀಮ ದೇಶಭಕ್ತಿ ವಿಚಾರ ಮತ್ತು ವಾಸ್ತವ್ಯವಾದತ್ವ ಮುಂತಾದವುಗಳು ಅದ್ವಿತೀಯವೆಂತಲೂ, ಇವರೇ ಬೆಳಗಾಂವಿಯ್ಯಲ್ಲಿ ಕೂಡಿದ ಮೊದಲನೇ ಕ. ವಿ ಪರಿಷತ್ತಿಗೆ ಗಾಂಧಿಯವರು ಬೆಳಗಾಂವಿಯ ಕಾಂಗ್ರೆಸ್ ಅಧಿವೇಶನಕ್ಕೆ ಅಧ್ಯಕ್ಷರಾಗಿದ್ದಾಗ ಅಧ್ಯಕ್ಷರಾಗಿದ್ದರೆಂತಲೂ ಮೈಸೂರಾ ವಿಷಯಗಳ ಮೇಲೆ ಭಾಷಣ ಮಾಡಿದರು. ಸಭೆಯು ಕ್ರಿಕ್ಕಿರಿದು ನೆರೆದಿದ್ದರಿಂದ ಧ್ವನಿವಾಹಕ ಯಂತ್ರದ ಏರ್ಪಾಟು ಸ್ಥಾಪಿಸಲಾಗಿತ್ತು. ಶ್ರೀ ಕಂಬಳಿಯವರು ಸುಮಾರು ೧ ತಾಸಿನವರೆಗೂ ಅಸ್ಖಲಿತ ವಾಣಿಯಿಂದ ಭಾಷಣ ಮಾಡಿ ಆಂಧ್ರ ಪ್ರಾಂತದೊಡನೆ ಕರ್ನಾಟಕ ಪ್ರಾಂತ ನಿರ್ಮಾಣವಾಗದೇ ಹೋದರೆ ಕನ್ನಡಿಗರೆಲ್ಲರೂ ಅಸಹಕಾರ ಮತ್ತು ಸತ್ಯಾಗ್ರಹ ಜಳವಳಿಯನ್ನು ಹೂಡಲು ಸಿದ್ಧರಾಗಿರಬೇಕೆಂದು ಹೇಳಿದರು. ನಂತರ ಶ್ರೀ ಕೊಳ್ಳಿಯವರು, ಕೋಟಿ ಚನ್ನಬಸಪ್ಪ, ಮರುಳಸಿದ್ದಯ್ಯ, ಷಡಕ್ಷರಶಾಸ್ತ್ರಿ ಮುಂತಾದವರು ಭಾಷಣ ಮಾಡಿದನಂತರ ರಾತ್ರಿ ೧೧ ಗಂಟೆಗೆ ಸಭೆಯು ವಿರಾಮಗೊಂಡಿತು. ಬಳ್ಳಾರಿಯವರು ತಮಗೊಬ್ಬ ಒಳ್ಳೇ ನಿಷ್ಣಾತ ಕರ್ತೃತ್ವಶಾಲಿಯಾದಂಥ ಮುಖಂಡರು ದೊರೆತ ಬ್ಲಾ ಎಂದು ಹರ್ಷೋದ್ಗಾರಗೈದರು. ಮರುದಿನ ಶ್ರೀ ಕಂಬಳಿಯವರು ಮತ್ತು ಕೊಳ್ಳಿ ವಕೀಲರು ರಾಯದುರ್ಗ, ಆದವಾನಿ, ಆಲೂರುಗಳ ಕಡೆಗೆ ಪ್ರಯಾಣ ಬೆಳೆಸಿದರು.

.....

ಪತ್ತಿಕೊಂಡ ತಾಲೂಕು ಪೂರ್ವ ಕರ್ನಾಟಕದ ಭಾಗವು

ಇದೇನು ಹೊಸ ಸೊಲ್ಲಲ್ಲ. ಆ ಪತ್ರಿಕೆ ಕರ್ನೂಲಿನ 'ಜ್ವಾಲಾ' ಪತ್ರಿಕೆಯು ಮಾತ್ರ ಇದು ಬಳ್ಳಾರಿ ಜಿಲ್ಲೆಯವರು ಹೊಸದಾಗಿ ಎಬ್ಬಿಸಿರುವ 'ಗುಲ್ಲೆ'ಂದು ಬೆನರಿದೆ. ರೊಚ್ಚಿಗೆದ್ದಿದೆ. ಪತ್ತಿಕೊಂಡ ತಾಲೂಕನ್ನು ಕನ್ನಡಿಗರ ದಾಳಿಯಿಂದ ರಕ್ಷಿಸುವ ಬಾಧ್ಯತೆಯನ್ನು ಪತ್ತಿಕೊಂಡ ಗ್ರಾಮದಲ್ಲಿ ಪ್ರಕಟವಾಗುತ್ತಿರುವ 'ಸಂದ್ರಾವತಿ' ಎಂಬ ಪತ್ರಿಕೆಗೆ ಒಪ್ಪಿಸಿದೆ. ಆದರೆ ಆದೇ ಕೋ 'ಆಂಧ್ರಾಭಿಮಾನಿ' ಪತ್ರಿಕೆಯು ತನ್ನ ೯-೧-೪೮ ರ ಸಂಚಿಕೆಯಲ್ಲಿ "ಜ್ವಾಲಾ' ಪತ್ರಿಕೆಯು ಎಬ್ಬಿಸಿದ ಜ್ವಾಲೆಯ ಮೇಲೆ ತಣ್ಣೀರನ್ನೆರಚಿದೆ ತನ್ನ ಬಾಧ್ಯತೆಯು ಒಂದು ತಾಲೂಕಿಗೆ ಮಾತ್ರ ಸಂಬಂಧಿಸಿದ್ದಲ್ಲವಂತೆ! ಎಲ್ಲಿ ಅವಸರವೆಂದು ತೋರುವದೋ ಅಲ್ಲಿ ಬಾಧ್ಯತೆ ವಹಿಸುವದಂತೆ! ಹೊಳೆಯು ಹರಿಯುವಂತೇ ಹರಿಯುವದಂತೆ! ಇತರ ಪತ್ರಿಕೆಗಳಿಗೆ ಬಾಧ್ಯತೆ ಇಲ್ಲವೇನೋ ಎಂಬ ಸಂಶಯವನ್ನು ಸಹಾ ಸೂಚಿಸಿದೆ. ಇಷ್ಟೇ ಅಲ್ಲ. "ಪತ್ತಿಕೊಂಡ ತಾಲೂಕಾ ಪೂರ್ವಕರ್ನಾಟಕವನ್ನು ಏನೂಲನೋ ಒಕರು ಕೊಕ್ಕರಿಂಚಿನ ಅದಿ ಲೆಕ್ಕ ಬೆಟ್ಟುಟ ಅವಿವೇಕ"ವೆಂದು ಉದ್ಗಾರ ತೆಗೆದಿದೆ. ಅಹುದು! ಪತ್ತಿಕೊಂಡದಲ್ಲಿರುವ ತನ್ನ ಪತ್ರಿಕಾಲಯವೇ ವಿಶಾಲಪ್ರಪಂಚವೆಂದು ತಿಳಿದುಕೊಂಡಿರುವ ಈ ಸಂಪಾದಕ ಮಹಾಶಯರಿಗೆ ಉಳಿದುದೆಲ್ಲ "ಮೂಲೆ" ಯೇ ಸರಿ. ಇವರು ಉಪಯೋಗಿಸಿರುವ "ಕೊಕ್ಕರಿಂಚಿನ" ಎಂಬ ಶಬ್ದವು ಇವರ ಆಂಧ್ರ ಭಾಷೆಯ ಅಗಾಧ ಪಾಂಡಿತ್ಯವನ್ನು ಸೂಚಿಸುತ್ತದೆ. ಸಂಪಾದಕರು ಲೇಖನಿಯು ಅಲ್ಲಲ್ಲಿ ನಿಂತಿದ್ದರೆ ಈ ಲೇಖನವನ್ನು ಬರೆಯುವ ಪ್ರಸಂಗವೇ ನಮಗೆ ಬರುತ್ತಿದ್ದಿಲ್ಲ. ಇನ್ನು ಮುಂದೆ ಸಾಗುತ್ತ "ರೋಷಣ ಭೀಷಣ ಮುಲುವಲಸಿನ ವಚ್ಚನು" ಎಂದ್ರೆಸ್ತೊಂದು ಪ್ರಗಲ್ಭ ವಾಕ್ಯವನ್ನು ಪ್ರಯೋಗಿಸಿದ್ದಾನೆ. ಆ "ರೋಷಣ ಭೀಷಣಗಳು" ಸಂಪಾದಕರ ತಲೆಯಲ್ಲಿ ಎಂದು ಮೂಡಿದ್ದವೋ ಎದುರು ನೋಡಬೇಕಾಗಿದೆ. "ಯಾವದೋ ಒಂದು ಮೂಲೆಯಲ್ಲಿ ಯಾರೋ ಒಬ್ಬರು ಪತ್ತಿಕೊಂಡ ತಾಲೂಕು ಪೂರ್ವ ಕರ್ನಾಟಕವೆಂದು 'ಕೊಕ್ಕರಿಸಿ'ದರೆ ಅದನ್ನು ಲೆಕ್ಕಕ್ಕೆ ತರುವದು ಅವಿವೇಕವೆಂ"ದು ಘೋಷಿಸಿದ ಸಂಪಾದಕರೇ ಆದೇ ತನ್ನ ಸಂಚಿಕೆಯಲ್ಲಿ ಅಂಥ 'ಅವಿವೇಕ'ವೊಂದನ್ನು ಪ್ರಕಟಿಸಿರುವರು. 'ಆಂಧ್ರಾಭಿಮಾನಿ' ಎಂಬೊಬ್ಬರೆ "ಪತ್ತಿಕೊಂಡ ತಾಲೂಕು ಕರ್ನಾಟಕುಲ ಲೋ ಜೇಕದು" ಎಂಬ ಲೇಖನವನ್ನು ಪ್ರಕಟಿಸಿರುವರು. ಈ 'ಆಂಧ್ರಾಭಿಮಾನಿ'ಯು ಹೇಳುವದೇನೆಂದರೆ;

ಅನಾದಿಕಾಲದಿಂದಲೂ ಪತ್ತಿಕೊಂಡ ತಾಲೂಕಿನಲ್ಲಿ ತೆಲುಗು ಭಾಷೆಯನ್ನೇ ಮಾತಾಡುವರು. ಕನ್ನಡವನ್ನು ಮಾತಾಡುವವರು ನೂರಕ್ಕೆ ೩ ಕ್ಕಿಂತ ಹೆಚ್ಚಿಲ್ಲ. ಅವರು ಸಹಾ ಬಳ್ಳಾರಿ ಜಿಲ್ಲೆಯ ಕನ್ನಡ ಪ್ರಾಂತಗಳಿಂದ ಬಂದವರೋ ಇಲ್ಲವೆ ಅವರೊಡನೆ ಬಾಂಧವ್ಯವುಳ್ಳವರೋ ಇರಬಹುದು. ಸಾಮಾನ್ಯ ಪ್ರಜಾನೀಕವೆಲ್ಲವೂ ತೆಲುಗನ್ನೇ ಮಾತಾಡುವರು. ಕರ್ನಾಟಕರು ಪತ್ತಿಕೊಂಡವನ್ನು ತಮ್ಮ ದೇಶದಲ್ಲಿ ಸೇರಿಸಬೇಕು ಎಂ[illegible]ವದರಲ್ಲಿ ಅರ್ಥವಿಲ್ಲ. ಯಾವದೊಂದು ವಿಷಯವನ್ನು ಚರ್ಚಿಸುವಾಗ ಅಯಾ ಪ್ರಾಂತೀಯ ಭಾಷೆಗಳನ್ನೂ ಆ ದೇಶದ ಆಚಾರಗಳನ್ನೂ ನಡತೆಗಳನ್ನೂ ಚೆನ್ನಾಗಿ ತಿಳಿದುಕೊಂಡೇ ಮಾತಾಡಬೇಕು. "ಪತ್ತಿಕೊಂಡ" ತೆಲುಗು ಶಬ್ದವೆಂದು ಕರ್ನಾಟಕರು ಗ್ರಹಿಸತಕ್ಕದ್ದು. 'ಪುಕ್ಕಿಟೆ' ಪುರಾಣಗಳನ್ನು ಹೇಳಿದರೆ ಪ್ರಜ್ಞಾವಂತರು ನಂಬದೇ "ನಾವು ಆಂಧ್ರ ನಾವು ತೆಲುಗರು" ಎಂದು ಸಮರ್ಥಿಸಿ ಕರ್ನಾಟಕವನ್ನು ವಾಗ್ಬಂಧನ ಮಾಡಬೇಕು. ಸುಮ್ಮನಿಷ್ಟರೆ ಪ್ರಯೋಜನವಿಲ್ಲ ಪ್ರತಿಗ್ರಾಮಗಳಲ್ಲೂ ಸಭೆಗಳನ್ನು ಜರುಗಿಸಿ ನಿರಸನ ಭಾವವನ್ನು ಪ್ರಕಟಿಸಿರಿ" ಇತ್ಯಾದಿ-

ಈ ಲೇಖಕನು ತೆಲುಗರೇ ಅಲ್ಲವೆಂಬುದು ಅವರು ಇಟ್ಟುಕೊಂಡಿರುವ 'ಆಂಧ್ರಾಭಿಮಾನಿ' ಎಂಬ ಹೆಸರೇ ಸಾರುತ್ತದೆ. ಅವರ ಲೇಖನದ ಶೈಲಿಯು ಸಹಾ ಅವರ ಆಂಧ್ರತ್ವವನ್ನು ಕಡೆಗಣಿಸುತ್ತದೆ. 'ಪತ್ತಿಕೊಂಡ' ಎಂಬುದು ತೆಲುಗು ಮಾತಂತೆ' ಈ ಸಂಯುಕ್ತ ಶಬ್ದದಲ್ಲಿರುವ 'ಪತ್ತಿ' ನ್ನು ತ್ತು 'ಕೊಂಡ' ಇವೆರಡೂ ಶುದ್ಧ ಕನ್ನಡ ಶಬ್ದಗಳು. (ಕಿಟೆಲ್ ಅವರ 'ಕನ್ನಡ ಶಬ್ದಕೋಶ" ಪುಟಗಳು ೧೩೪ ಮತ್ತು ೪೮೨ ನೋಡಿರಿ) 'ಪರ್ತಿ, ಹಂಜಿ, ಹತ್ತಿ' ಇವುಗಳು 'ಪತ್ತಿ' ಶಬ್ದದ ರೂಪಾಂತರಗಳು ಬರಿ ಪತ್ತಿಕೊಂಡ ತಾಲೂಕೇ ಏಕೆ? ಶ್ರೀಶೈಲ ಪ್ರಾಂತವೆಲ್ಲ ಕನ್ನಡಿಗರ ಮನೆನಾಡು ಇದು ಬರೀ 'ಪುಕ್ಕಿಟೆ' ಪುರಾಣದ ಮಾತಲ್ಲ. ಶಾಸನಗಳ ಆಧಾರವುಂಟು. ತೆಲುಗು ಕನ್ನಡ ಚರಿತ್ರೆಗಳ ಆಧಾರವುಂಟು. ಈ ಪ್ರಾಂತದವರ ನಡೆ, ನುಡಿ, ಪರಂಪರೆ, ಸಂಸ್ಕೃತಿ, ವೇಷ, ಆಚಾರ, ವ್ಯವಹಾರ ಮುಂತಾದವುಗಳು ಇದೂ ಕನ್ನಡ ನಾಡಿನ ಧ್ರುವಾಂಗೂರವಾಗಿ ಸಾರುತ್ತವೆ. ತೆಲುಗು ಪಂಡಿತರು ಮಾಡಿರುವ "ತ್ರಿಲಿಂಗ" ಶಬ್ದದ ನಿರ್ವಚನದಿಂದ ತೆಲುಗುದೇಶದ ಪಶ್ಚಿಮ ಸರಹದ್ದು ಶ್ರೀಶೈಲ ಪರ್ವತಕ್ಕೇನೇ ನಿಂತುಬಿಡುತ್ತವೆ. ಶಾಸನಗಳ ರೀತ್ಯಾ ಶ್ರೀಶೈಲ ಕ್ಷೇತ್ರದ ಸುತ್ತಮುತ್ತಣ ನಾಡು "ಕರ್ಣಾಟಕ ವಿಷಯ, ಕನ್ನಾಡು ಮತ್ತು ಕರ್ನಾಟಕ ಸೀಮೆ" ಎಂದು ಕರೆಯಲ್ಪಡುತ್ತಿದ್ದಿತು. ಶ್ರೀಶೈಲ ಮಲ್ಲಿಕಾರ್ಜುನ ದೇವಾಲಯದ ಶಕೆ ೧೩೮೮ ರ ಒಂದು ಶಾಸನದಲ್ಲಿ "ಕರ್ನಾಟಕ ಲಕ್ಷ್ಮೀ (ಃ) ಸವಿಲಾಸ ಮಾನಯುಷ್ಮಿನ್ ಮಹೀಪೇ ಮಹನೀಯ ಕೀರ್ತಿಯನ್ನು ಕೊಂಡಾಡುತ್ತಾನದು. ಅದೇ ವಾಕ್ಯವೆ ಬಳ್ಳಾರಿ ತಾ|| ಸೋಮಲಾಪುರದಲ್ಲಿರುವ ಕ್ರಿ ಶ. ೧೩೮೮ ರ ಶಾಸನವೊಂದರಲ್ಲಿ ಕಾಂಡುಬರುತ್ತಿದ್ದು ಆಗಿನ ಕಾಲದಲ್ಲಿ ಕರ್ನಾಡಿನ ಭಾಗವಾದ ಶ್ರೀಶೈಲ ರಾಜ್ಯವು ಕರ್ನೂಲು ತಾಲೂಕು, ಪತ್ತಿಕೊಂಡ ತಾಲೂಕು, ಆದವಾನಿ, ಆಲೂರು, ರಾಯದುರ್ಗ ತಾಲೂಕುಗಳನ್ನು ಒಳಗೊಂಡು ಬಳ್ಳಾರಿಯವರೆವಿಗೂ ವ್ಯಾಪಿಸಿದ್ದಿತು "ಆಂದ್ರಾವತಿ" ಯ ಸಂಪಾದಕರ 'ರೋಷ ಭೀಷಣಗಳ ಪ್ರದರ್ಶನೆಯನ್ನು ನಾವು ಒಳ್ಳೇ ಆಸಕ್ತಿಯಿಂದ ಎದುರು ನೋಡುತ್ತಿರುವೆವು. ಅವರಿಗೆ ನಮ್ಮ ವಿನಂತಿ ಇಷ್ಟೆ. ನಿಮ್ಮ ವಾದವನ್ನು ಸಮರ್ಥಿಸಲೂ ಆಂಕೆ ಅಂಶಗಳನ್ನು ಪ್ರಕಟಿಸಿರಿ. ಆ ತಾಲೂಕಿನಲ್ಲಿ ಯಾವ ಯಾವ ಗ್ರಾಮಗಳಲ್ಲಿ ಯಾವ ಯಾವ ಭಾಷೆಗಳ ಶಾಸನಗಳಿವೆ? ಯಾವ ಯಾವ ಕಾಲದಲ್ಲಿ ಯಾವ ಯಾವ ಅರಸರುಗಳು ಆಳಿದರು? ಹಳ್ಳಿಗಳ ಹೆಸರುಗಳು ಕನ್ನಡದಲ್ಲಿರಲೂ ಕಾರಣವೇನು? ಆ ಪ್ರಾಂತದ ಸಂಸ್ಕೃತಿಯ ವೈಶಿಷ್ಟ್ಯವೇನು? ಈ ಅಮೂಲ್ಯ ಅಂಶಗಳನ್ನು ಶೋಧಿಸಿ ಪ್ರಕಟಿಸಿದರೆ ನಿಮ್ಮ ಪತ್ರಿಕೆಯು ಜನತೆಗೆ ಒಂದು ಘನವಾದ ಸೇವೆಯನ್ನು ಸಲ್ಲಿಸಿದಂತಾಗುತ್ತದೆ. ಶುಷ್ಕ ಪಟಾತೋಪದಿಂದ ಪ್ರಯೋಜನವಿಲ್ಲ. 'ಜ್ವಾಲಾ' ಪತ್ರಿಕೆಯವರಿಗೂ ಇದೇ ವಿನಂತಿಯು.

—ಓರ್ವ ಕನ್ನಡಿಗ

ಪಾಕಿಸ್ಥಾನದ ವಿರುದ್ಧ ಪಠಾಣರ ಆಂದೋಳನ

ಪಾಕಿಸ್ಥಾನದ ವಿರುದ್ಧ ಪಠಾಣರು ಆಂದೋಳನ ಮಾಡಹತ್ತಿರುವರು. ಅಜ್ಞಾತ ವಾಸದಲ್ಲಿರುವ ನಾಲ್ವತ್ತು ವ್ಯಕ್ತಿಂದಿ ಅಫಘಾನ ರಾಜಕುಮಾರರು ಪಠಾಣಿಸ್ಥಾನವನ್ನು ಸ್ಥಾಪಿಸಲು ಇದೇ ತಕ್ಕ ಸಮಯವು. ಸಮಯವನ್ನು ಕಳಕೊಂಡರೆ ಪಾಕಿಸ್ಥಾನವು ಬಲಿತು ಪಠಾಣರನ್ನು ಬಗ್ಗು ಬಡಿಯುವದೆಂದು ಪಠಾಣರನ್ನು ಎಚ್ಚರಿಸಹತ್ತಿರುವರು. ಇಪ್ಪೀ ಫಕ್ಕೀರನು ಬ್ರಿಟಿಶರಿಗೆ ಕೊಡುತ್ತಿದ್ದ ತೊಂದರೆಗಳನ್ನು ಪಾಕಿಸ್ಥಾನಕ್ಕೆ ಕೊಡಹತ್ತಿರುವನು. ಪಾಕಿಸ್ಥಾನದ ಸರಕಾರವು 'ಗಡಿನಾಡಿನ ಗಾಂಧಿ'ಯನ್ನು ಲೈಸೆನ್ಸು ಇಲ್ಲದೇ ರಿವಾಲ್ವರನ್ನು ಇಟ್ಟುಕೊಂಡಿದ್ದನೆಂಬುವ ಆರೋಪದ ಮೇಲೆ ಬಂಧಿಸಿರುವದು. ಇದರಿಂದ ಕೆಂಪಂಗಿ ಸ್ವಯಂಸೇವಕರಿಲ್ಲರೂ ಕೋಪಾವಿಷ್ಟರಾಗಿರುವರು. ಪಾಕಿಸ್ಥಾನದ ವಿರುದ್ಧ ಆಂದೋಳನ ಜರುಗಿಸಹತ್ತಿರುವರು. ಇದರಿಂದ ಪಾಕಿಸ್ಥಾನ ಸರಕಾರಕ್ಕೆ ಬಹಳ ತಲೆಶೂಲೆ ಎದ್ದಿದೆ.

'ಜೀವನಾಧಾರ'

ಎಂಬುವ ಆಯುರ್ವೇದ ಮಾಸಪತ್ರಿಕೆಯು ವಿಜಯಪುರದಿಂದ ೧೫-೧-೪೮ ಆಯುರ್ವೇದ ತೀರ್ಥ ಜಿ. ವ್ಹಿ ಪುರಾಣೀಕ ಇವರ ಸಂಪಾದಕತ್ವದ ಕೆಳಗೆ ಹೊರಡುವದು.

ಬಣ್ಣದ ಜೇನುತುಪ್ಪ

ಆಮೇರಿಕಾದಲ್ಲಿ ತರತರಹದ ಬಣ್ಣಗಳುಳ್ಳ ಜೇನುತುಪ್ಪವನ್ನು ಹೂಳಗಳಿಂದ ಮಾಡಿಸಹತ್ತಿರುವರು. ಇದಕ್ಕಾಗಿ ಜೇನ ಹುಳಗಳು ಹೂವುಗಳಿಗೆ ತಮ್ಮ ಗೂಡುಗಳನ್ನು ಬಿಟ್ಟು ಹೋಗಬೇಕಾಗಿಲ್ಲ. ಕಾಜಿನ ಜೇನು ಗೂಡುಗಳ ಹತ್ತಿರ ಬಣ್ಣದ ಸಕ್ಕರೆ 'ಸಿರಪ್ಪ'ನ್ನು ಇಡುತ್ತಿರುವದರಿಂದ ಜೇನು ಹುಳಗಳು ಆ ಸಿರಪ್ಪನ್ನೇ ತಮ್ಮ ಗೂಡುಗಳಿಗೆ ತೆಗೆದುಕೊಂಡು ಹೋಗಿ ಅದನ್ನು ಜೇನಾಗಿ ಮಾರ್ಪಡಿಸುವವು.